# ಶಿಕ್ಷಣದ ತತ್ವಶಾಸ್ತ್ರ

**Philosophy of Education**

## ಒಂದು ವಿಮರ್ಶಾತ್ಮಕ ಪರಿಶೀಲನೆ

ನಾವು ಶಿಕ್ಷಣದ ತತ್ವಶಾಸ್ತ್ರವನ್ನು ಕುರಿತು ಚರ್ಚಿಸುತ್ತಿದ್ದರೂ ಇನ್ನೂ ತತ್ವಶಾಸ್ತ್ರದ ವ್ಯಾಖ್ಯಾನವನ್ನು ನೀಡಲಾಗಿಲ್ಲ ಅಥವಾ ಶಿಕ್ಷಣದ ತತ್ವಶಾಸ್ತ್ರದ ಸ್ವರೂಪದ ಬಗೆಗೆ ನೇರವಾದ ಪರಿಗಣನೆಯನ್ನೂ ಸಹ ಮಾಡಿರುವುದಿಲ್ಲ. ಇದು ಒಳಗೊಳ್ಳುವ ತಾತ್ವಿಕ ವಿಚಾರಗಳನ್ನು ಪ್ರಸ್ತಾಪಿಸುವ ಉದ್ದೇಶದಿಂದ ಈ ಹಿಂದಿನ ಚರ್ಚೆಗಳಲ್ಲಿ ಸೂಚಿತವಾಗಿರುವ ತಾರ್ಕಿಕ ಕ್ರಮದ ಸಾರಾಂಶದೊಂದಿಗೆ ಈ ವಿಷಯ (ಶಿಕ್ಷಣದ ತತ್ವಶಾಸ್ತ್ರ) ವನ್ನು ಪ್ರಸ್ತಾಪಿಸಲಾಗಿದೆ. ಆ ನಂತರ ಹೆಚ್ಚು ನಿರ್ದಿಷ್ಟವಾದ ತಾತ್ವಿಕ ನುಡಿಗಟ್ಟಿನಲ್ಲಿ ಜ್ಞಾನಸಿದ್ಧಾಂತಗಳನ್ನೂ, ವಿವಿಧ ಶೈಕ್ಷಣಿಕ ಆದರ್ಶಗಳಲ್ಲಿ ಅಡಗಿರುವ ನೀತಿಗಳನ್ನೂ ( morals ), ಅವು ಪ್ರಯೋಗಕ್ಕೆ ಒಳಪಟ್ಟಂತೆ, ನಾವು ಸಂಕ್ಷಿಪ್ತವಾಗಿ ಚರ್ಚಿಸೋಣ.

ಹಿಂದಿನ ಅಧ್ಯಾಯಗಳನ್ನು ತಾರ್ಕಿಕವಾಗಿ ಮೂರು ವಿಭಾಗಗಳಾಗಿ ನೋಡಬಹುದು.

I . ಮೊದಲ ಅಧ್ಯಾಯಗಳಲ್ಲಿ ಶಿಕ್ಷಣವನ್ನು ಒಂದು ಸಾಮಾಜಿಕ ಅಗತ್ಯ ಮತ್ತು ಕಾರ್ಯವಾಗಿ ಚರ್ಚಿಸಲಾಗಿದೆ. ಸಾಮಾಜಿಕ ಗುಂಪುಗಳ ನಿರಂತರ ಅಸ್ತಿತ್ವಕ್ಕಾಗಿ ಶಿಕ್ಷಣದ ಸಾಮಾನ್ಯ ಲಕ್ಷಣಗಳನ್ನು ಒಂದು ಪ್ರಕ್ರಿಯೆಯಂತೆ ಪರಿಭಾವಿಸುವುದು ಈ ಅಧ್ಯಾಯಗಳ ಗುರಿಯಾಗಿದೆ. ಅಲ್ಲಿ, ಸಂವಹನದ ಮೂಲಕ ಅನುಭವದ ಅರ್ಥಗಳನ್ನು ನವೀಕರಿಸುವ ಪ್ರಕ್ರಿಯೆಯಾಗಿ ಶಿಕ್ಷಣವನ್ನು ತೋರಿಸಲಾಗಿದೆ. ಈ ಪ್ರಕ್ರಿಯೆ ವಯಸ್ಕರು ಮತ್ತು ಯುವಜನತೆಯ, ಹಿರಿಯ ಕಿರಿಯರ, ಒಡನಾಟದಲ್ಲಿ ಭಾಗಶಃ ಆನುಷಂಗಿಕವಾದ್ದರೆ, ಭಾಗಶಃ ಸಾಮಾಜಿಕ ನಿರಂತರತೆಯನ್ನು ಕಾಯ್ದುಕೊಳ್ಳಲು ಉದ್ದೇಶಪೂರ್ವಕವಾಗಿ ಸ್ಥಾಪಿಸಿದುದೂ ಆಗಿದೆ. ಈ ಪ್ರಕ್ರಿಯೆಯನ್ನು ಇನ್ನೂ ಪ್ರಬುದ್ಧನಾಗಬೇಕಾದ ವ್ಯಕ್ತಿಯ ಹಾಗೂ ಆತನ ಸಮುದಾಯದ ನಿಯಂತ್ರಣ ಹಾಗೂ ಬೆಳವಣಿಗೆಯಂತೆ ಕಾಣಲಾಗಿದೆ.

ಈ ಪರಿಗಣನೆ ಔಪಚಾರಿಕವಾದುದು. ಏಕೆಂದರೆ ಇದು ಶಿಕ್ಷಣದ ಮೂಲಕ ನಿರಂತರತೆಯನ್ನು ಕಾಯ್ದುಕೊಳ್ಳುವ ಗುರಿ ಹೊಂದಿರುವ ಒಂದು ಸಮುದಾಯದ ಗುಣಮಟ್ಟ ದ ನಿರ್ದಿಷ್ಟ

ವಿವರವನ್ನು ಪರಿಗಣಿಸಿಲ್ಲ. ನಂತರ ಸಾಮಾನ್ಯ ಚರ್ಚೆಯನ್ನು ಉದ್ದೇಶಪೂರ್ವಕವಾದ ಪ್ರಗತಿಯ ಗುರಿ ಹೊಂದಿರುವ ಸಮುದಾಯಗಳಿಗೆ, ಕೇವಲ ಸ್ಥಾಪಿತ ಪದ್ಧತಿಗಳ ಪಾಲನೆಯ ಗುರಿಯಿರುವ ಸಮುದಾಯಗಳಿಗಿಂತ ಭಿನ್ನವಾದ ಹೆಚ್ಚಿನ, ವೈವಿಧ್ಯಮಯವಾದ , ಪರಸ್ಪರ ವಿನಿಮಯದ, ಸಾಮಾನ್ಯವಾದ ಆಸಕ್ತಿಗಳನ್ನು ಹೊಂದಿದ ಸಮುದಾಯಗಳಿಗೆ ನಿರ್ದಿಷ್ಟವಾಗಿ ಅನ್ವಯಿಸಲಾಯಿತು. ಅಂತಹ ಪುರೋಗಾಮೀ ಸಮಾಜಗಳು ಗುಣದಲ್ಲಿ ಪ್ರಜಾಸತ್ತಾತ್ಮಕವಾಗಿ ಕಂಡವು. ಆ ಸಮಾಜಗಳು ತಮ್ಮ ಸದಸ್ಯರಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡಿದ್ದರಿಂದ, ಅವು ಕೇವಲ ಉನ್ನತ ವರ್ಗಗಳ ಹಿಡಿತದಲ್ಲಿ ಕೆಲಸಮಾಡುವ ಪದ್ಧತಿಗಳ ಸಾಮರ್ಥ್ಯವನ್ನೇ ಅವುಗಳು ಅವಲಂಬಿಸದೇ ವ್ಯಕ್ತಿಗಳಲ್ಲಿ ಸಾಮಾಜಿಕ ಕಾಳಜಿಯನ್ನು ಕಾಣುವ ಪ್ರಜ್ಞಾಪೂರ್ವಕವಾದ ಅಗತ್ಯವನ್ನು ಮನಗಂಡಿದ್ದವು. ಹೀಗಾಗಿ ಪ್ರಜಾಸತ್ತಾತ್ಮಕವಾದ ಸಮುದಾಯದ ಬೆಳವಣಿಗೆಗೆ ಸೂಕ್ತವಾದ ಶಿಕ್ಷಣವನ್ನೇ ಶಿಕ್ಷಣದ ವಿಸ್ತೃತವಾದ ವಿಶ್ಲೇಷಣೆಗೆ ಸ್ಪಷ್ಟ ಮಾನದಂಡವಾಗಿ ತೆಗೆದುಕೊಳ್ಳಲಾಯಿತು.

II. ಪ್ರಜಾಸತ್ತಾತ್ಮಕ ಮಾನದಂಡ (democratic criterion) ವನ್ನು ಆಧರಿಸಿದ ಈ ವಿಶ್ಲೇಷಣೆಯು ಅನುಭವದ ನಿರಂತರ ಮರುರಚನೆಯ ಅಥವಾ ಮರುವ್ಯವಸ್ಥೆಯ ಆದರ್ಶವನ್ನು ಒಳಗೊಂಡಿದೆ. ಈ ಅನುಭವವು ಮರು ಸಂಘಟಿತವಾದ ಅರ್ಥವನ್ನು ಅಥವಾ ಅದರ ಸಾಮಾಜಿಕ ಸ್ವರೂಪವನ್ನು ಹೆಚ್ಚಿಸುವಂತಹುದಾಗಿದೆ; ಈ ಮರುರಚನೆಯ ನೇರ ಪಾಲಕರಾಗಿ ವ್ಯಕ್ತಿಗಳ ಸಾಮರ್ಥ್ಯವನ್ನು ಹೆಚ್ಚಿಸುವಂತಹುದಾಗಿದೆ (ನೋಡಿ ಅಧ್ಯಾಯ ೬-೭). ವಸ್ತುವಿಷಯ ಮತ್ತು ವಿಧಾನಗಳ ಸಂಬಂಧಿತ ಪಾತ್ರಗಳ ರೂಪರೇಖೆಯನ್ನು ನೀಡಲು ಈ ವಿವೇಚನೆಯನ್ನು ಬಳಸಲಾಗಿದೆ. ಅಧ್ಯಯನ ವಿಧಾನ ಮತ್ತು ಈ ವಿಧಾನದ ಆಧಾರದ ಮೇಲಿನ ಕಲಿಕೆಯು ಅನುಭವದ ವಸ್ತುವಿಷಯದ ಮರುನಿರ್ಮಾಣದ ಚಲನೆಯನ್ನು ಪ್ರಜ್ಞಾಪೂರ್ವಕವಾಗಿ ನಿರ್ದೇಶಿಸುವುದರಿಂದ ಇದು ಅವುಗಳ ಏಕತೆಯನ್ನೂ ನಿರ್ಧರಿಸಿದೆ. ಈ ಅಧ್ಯಯನ ವಿಧಾನ ಮತ್ತು ಕಲಿಕೆಯ ವಸ್ತುವಿಷಯದ ಪ್ರಧಾನ ತತ್ವಗಳನ್ನು ಈ ದೃಷ್ಟಿಕೋನದಿಂದ ಬೆಳೆಸಲಾಗಿದೆ(೧೩-೧೪)

III. ವ್ಯತ್ಯಾಸದ ಬಲದಿಂದ ತತ್ವಗಳನ್ನು ವಿಷದೀಕರಿಸುವ ಆನುಷಂಗಿಕ ವಿಮರ್ಶೆಯನ್ನು ಹೊರತು ಪಡಿಸಿದರೆ, ಈ ಹಂತದ ಚರ್ಚೆಯು ಪ್ರಸಕ್ತ ಸಾಮಾಜಿಕ ಜೀವನದ ಪ್ರಜಾಸತ್ತಾತ್ಮಕ ಮಾನದಂಡಗಳು ಮತ್ತು ಅವುಗಳ ಆನ್ವಯಿಕತೆಯನ್ನು ಯಥಾವತ್ತಾಗಿ ಅಂಗೀಕರಿಸಿದೆ. ಮುಂದಿನ ಅಧ್ಯಾಯಗಳಲ್ಲಿ (

೧೮-೨೩) ಅದರ ಈಡೇರುವಿಕೆಯಲ್ಲಿರುವ ಸದ್ಯದ ಮಿತಿಗಳನ್ನು ನಾವು ಪರಿಗಣಿಸಿದ್ದೇವೆ. ಅನುಭವವು ವಿವಿಧವಾದ ಪ್ರತ್ಯೇಕಿತ ವಲಯ ಅಥವಾ ಆಸಕ್ತಿಗಳಿಂದ ಕೂಡಿರುತ್ತದೆ ಮತ್ತು ಪ್ರತಿಯೊಂದು ಅನುಭವ ವಲಯಕ್ಕೂ ತನ್ನದೇ ಆದ ಸ್ವತಂತ್ರ ಮೌಲ್ಯ, ವಸ್ತು, ವಿಧಾನಗಳಿರುತ್ತವೆ; ಇವುಗಳು ಒಂದನ್ನೊಂದು ನಿಯಂತ್ರಿಸುತ್ತವೆ; ಪ್ರತಿಯೊಂದು ಅನುಭವವೂ ಬೇರೆಯ ಅನುಭವಗಳಿಂದ ಸುತ್ತುವರಿದು, ಶಿಕ್ಷಣದಲ್ಲಿ ಒಂದು ರೀತಿಯ "ಬಲಗಳ ಸಮತೋಲನ" ವನ್ನು ಉಂಟು ಮಾಡುತ್ತದೆ ಎಂಬ ವಿಚಾರಗಳಿಂದ ಆ ಮಿತಿಗಳು ಹುಟ್ಟಿಕೊಂಡಿವೆ. ನಂತರ ನಾವು ಈ ಪ್ರತ್ಯೇಕೀಕರಣದ ಹಿಂದಿನ ವಿವಿಧ ಗ್ರಹಿಕೆಗಳ ವಿಶ್ಲೇಷಣೆಗೆ ಮುಂದಾಗುತ್ತೇವೆ. ಪ್ರಾಯೋಗಿಕ ನೆಲೆಯಲ್ಲಿ ಈ ಗ್ರಹಿಕೆಗಳು ಪೂರ್ಣ ಪ್ರಮಾಣದ ಹಾಗೂ ಪರಿವರ್ತನಶೀಲ ಸಾಮಾಜಿಕ ಸಂವಹನ ಹಾಗೂ ಸಹವರ್ತನೆಗಳಿಗೆ ಅಡಚಣೆಯಾಗಿರುವ, ಹೆಚ್ಚೂ ಕಡಿಮೆ ಬಿಗುವಾದ, ವರ್ಗಗಳು ಮತ್ತು ಗುಂಪುಗಳಾಗಿ ಸಮಾಜವು ವಿಭಜನೆಗೊಂಡಿರುವುದರಲ್ಲಿವೆ ಎಂದು ಕಾಣಲಾಗಿದೆ. . ಈ ಸಾಮಾಜಿಕ ನಿರಂತರತೆಯ ಭಂಗವು ಶ್ರಮ ಮತ್ತು ವಿರಾಮ, ಪ್ರಾಯೋಗಿಕ ಮತ್ತು ಬೌದ್ಧಿಕ ಚಟುವಟಿಕೆ, ಮಾನವ ಮತ್ತು ಪ್ರಕೃ ತಿ, ವ್ಯಕ್ತಿ ಮತ್ತು ಸಮುದಾಯ, ಸಂಸ್ಕೃತಿ ಮತ್ತು ವೃತ್ತಿ ಮುಂತಾದ ವಿವಿಧ ದ್ವಿರೂಪಗಳು(dualisms) ಹಾಗೂ ವೈರುಧ್ಯ(antitheses) ಗಳಾಗಿ ಬೌದ್ಧಿಕ ಸೂತ್ರೀಕರಣದಲ್ಲಿ ಪರ್ಯಾವಸಾನಗೊಳ್ಳುತ್ತವೆ. ಈ ವಿವಿಧ ವಿಚಾರಗಳು ಅವುಗಳ ಪೂರಕವಿಚಾರಗಳನ್ನು ಅಭಿಜಾತ ತತ್ವಶಾಸ್ತ್ರೀಯ ಪದ್ಧತಿಗಳ( classic philosophic systems) ಸೂತ್ರೀಕರಣಗಳಲ್ಲಿ ಹೊಂದಿವೆ ಎಂದು ಈ ಚರ್ಚೆಗಳಿಂದ ನಾವು ಕಂಡುಕೊಂಡಿದ್ದೇವೆ. ಅವುಗಳು ಮನಸ್ಸು ಅಥವಾ ಚೇತನ ಮತ್ತು ವಸ್ತು ಅಥವಾ ಜಡ, ಶರೀರ ಮತ್ತು ಮನಸ್ಸು, ಮನಸ್ಸು ಮತ್ತು ಜಗತ್ತು, ವ್ಯಕ್ತಿ ಮತ್ತು ಸಾಮಾಜಿಕ ಸಂಬಂಧಗಳು ಹೀಗೆ ತತ್ವಶಾಸ್ತ್ರದ ಪ್ರಧಾನ ಸಮಸ್ಯೆಗಳನ್ನು ಒಳಗೊಳ್ಳುತ್ತವೆ. ಈ ವಿವಿಧ ಪ್ರತ್ಯೇಕೀಕರಣಗಳ ಒಳಗೆ ದೈಹಿಕ ಪರಿಸ್ಥಿತಿಗಳು, ಶಾರೀರಿಕ ಅಂಗಗಳು, ಭೌತಿಕ ಸಾಧನಗಳು, ಪ್ರಾಕೃತಿಕ ವಸ್ತುಗಳು ಇವುಗಳನ್ನು ಒಳಗೊಂಡ ಚಟುವಟಿಕೆಗಳಿಂದ ಮನಸ್ಸು ಮೂಲಭೂತವಾಗಿ ಪ್ರತ್ಯೇಕವಾದುದೆಂಬುದನ್ನು ನಾವು ಕಂಡುಕೊಂಡೆವು. ಪರಿಣಾಮವಾಗಿ ಪ್ರಕೃತಿಯನ್ನು ನಿಯಂತ್ರಿಸುವ ಚಟುವಟಿಕೆಯಲ್ಲಿ ಮನಸ್ಸಿನ ಉಗಮ, ಸ್ಥಾನ ಮತ್ತು ಕಾರ್ಯವನ್ನು ಗುರುತಿಸುವ ಒಂದು ತತ್ವಶಾಸ್ತ್ರವು ಸೂಚಿತವಾಗುತ್ತದೆ. ಹೀಗೆ ನಾವು ಒಂದು ಆವರ್ತವನ್ನು ಪೂರ್ಣಗೊಳಿಸಿ ಈ ಪುಸ್ತಕದ ಮೊದಲ ಅಧ್ಯಾಯದ ಪರಿಕಲ್ಪನೆಗಳಿಗೆ ಮರಳಿದ್ದೇವೆ. ಅವೆಂದರೆ ಪ್ರಾಕೃತಿಕ ಶಕ್ತಿಗಳೊಂದಿಗೆ

ಸಾತತ್ಯದಲ್ಲಿರುವ ಮಾನವ ಪ್ರವೃತ್ತಿಗಳು ಮತ್ತು ಪ್ರೇರಣೆಗಳು, ಒಂದು ಸಮಾನವಾದ ಉದ್ದೇಶವನ್ನು ಒಳಗೊಂಡ ಸಂಯುಕ್ತ ಚಟುವಟಿಕೆಗಳಲ್ಲಿ ಮನಸ್ಸು ಭಾಗಿಯಾಗುವುದರ ಮೇಲೆ ಅದರ ಬೆಳವಣಿಗೆಯು ಅವಲಂಬಿತವಾಗಿರುವುದು; ಸಾಮಾಜಿಕ ಮಾಧ್ಯಮದ ಮೇಲೆ ಭೌತಿಕ ವಾತಾವರಣವು ಅದರ ಬಳಕೆಯ ಮೂಲಕ ಉಂಟುಮಾಡುವ ಪರಿಣಾಮ; ಕ್ರಮೇಣ ಬೆಳವಣಿಗೆ ಹೊಂದುವ ಒಂದು ಸಮಾಜಕ್ಕಾಗಿ ವ್ಯಕ್ತಿಗಳ ಬಯಕೆ ಮತ್ತು ಚಿಂತನೆಗಳಲ್ಲಿ ಆಗುವ ಬದಲಾವಣೆಗಳನ್ನು ಬಳಸಿಕೊಳ್ಳಬೇಕಾದ ಅಗತ್ಯ; ವಸ್ತುವಿಷಯ ಮತ್ತು (ಶಿಕ್ಷಣ) ವಿಧಾನಗಳ ಮೂಲಭೂತ ಏಕತೆ, ಮಾರ್ಗ ಮತ್ತು ಗುರಿಗಳ ಅಂತರ್ಗತ ಸಾತತ್ಯ; ವರ್ತನೆಯ ಅರ್ಥಗಳನ್ನು ಗ್ರಹಿಸುವ ಮತ್ತು ಪರೀಕ್ಷಿಸುವ ಚಿಂತನೆಯ ಅಂಗ ಎಂದು ಮನಸ್ಸನ್ನು ಗುರುತಿಸುವುದು. ಈ ಪರಿಕಲ್ಪನೆಗಳು ಬುದ್ಧಿಮತ್ತೆ ಎನ್ನುವುದು ಕ್ರಿಯೆಯ ಮೂಲಕ ಭೌತಿಕ ಅನುಭವದ ಉದ್ದೇಶಪೂರ್ಣ ಪುನರ್ ರಚನೆ ಎಂದು ಗುರುತಿಸುವ ತತ್ವಶಾಸ್ತ್ರದೊಂದಿಗೆ ಸಾತತ್ಯ ಹೊಂದಿದ್ದು ಹಿಂದೆ ಹೇಳಿದ ದ್ವಿರೂಪದ ತತ್ವಶಾಸ್ತ್ರಗಳೊಂದಿಗೆ ಸಾತ್ಯ ಹೊಂದಿರುವುದಿಲ್ಲ.

### ತತ್ವಶಾಸ್ತ್ರದ ಸ್ವರೂಪ

ನಮ್ಮ ಮುಂದಿನ ಪ್ರಯತ್ನವು ಈ ಪರಿಗಣನೆಗಳಲ್ಲಿ ಸೂಚ್ಯವಾಗಿರುವ ತತ್ವಶಾಸ್ತ್ರದ ಸಾರಸತ್ವವನ್ನು ಹೊರತೆಗೆದು ಅದನ್ನು ಸ್ಪಷ್ಟಗೊಳಿಸುವುದಾಗಿದೆ. ನಾವು ತತ್ವಶಾಸ್ತ್ರವನ್ನು ವ್ಯಾಖ್ಯಾನಿಸಿಲ್ಲದಿದ್ದರೂ ಈಗಾಗಲೇ ವಸ್ತುತಃ ಅದನ್ನು ಅದು ಕೈಗೆತ್ತಿಕೊಳ್ಳುವ ಸಮಸ್ಯೆಗಳ ಮೂಲಕ ಅದನ್ನು ವಿವರಿಸಿದ್ದೇವೆ. ಹಾಗೂ ಸಾಮಾಜಿಕ ಜೀವನದ ಸಂಘರ್ಷ ಮತ್ತು ಸಂಕಷ್ಟಗಳಲ್ಲಿ ಈ ಸಮಸ್ಯೆಗಳು ಉದ್ಭವವಾಗುತ್ತವೆ ಎಂಬುದನ್ನು ತೋರಿಸಿದ್ದೇವೆ. ಮನಸ್ಸು ಮತ್ತು ಭೌತವಸ್ತುವಿನ ನಡುವಿನ ಸಂಬಂಧ; ಶರೀರ ಮತ್ತು ಆತ್ಮ; ಮಾನವಕುಲ ಮತ್ತು ಭೌತಿಕ ಪ್ರಕೃತಿ; ವ್ಯಕ್ತಿಗತ ಮತ್ತು ಸಾಮಾಜಿಕ; ಸಿದ್ಧಾಂತ ಅಥವಾ ಅರಿವು ಮತ್ತು ಆಚರಣೆ ಅಥವಾ ಕ್ರಿಯೆ ಇವು ಆ ಸಮಸ್ಯೆಗಳಾಗಿವೆ. ಈ ಸಮಸ್ಯೆಗಳನ್ನು ಸೂತ್ರೀಕರಿಸುವ ತಾತ್ವಿಕ ಪದ್ಧತಿಗಳು ಸಮಕಾಲೀನ ಸಾಮಾಜಿಕ ಆಚರಣೆಯ ಪ್ರಧಾನ ರೂಪುರೇಖೆಗಳನ್ನೂ ಮತ್ತು ಸಂಕಷ್ಟಗಳನ್ನೂ ದಾಖಲಿಸುತ್ತವೆ. ಈ ತಾತ್ವಿಕ ಪದ್ಧತಿಗಳು ಮನುಷ್ಯರು ತಮ್ಮ ಪ್ರಸಕ್ತ ಅನುಭವಗಳ ಮೂಲಕ ತಮ್ಮದೇ ಬಗೆಗೆ, ಪ್ರಕೃತಿಯ ಬಗೆಗೆ, ತಾವು ಗ್ರಹಿಸುವ ಅಥವಾ ನಿಯಂತ್ರಿಸುವ ವಾಸ್ತವದ ಬಗೆಗೆ ಏನನ್ನು ಯೋಚಿಸುತ್ತಾರೋ ಅದನ್ನು ಸ್ಪಷ್ಟ ಅರಿವಿಗೆ ತರುತ್ತವೆ.

ತತ್ವಶಾಸ್ತ್ರದ ಸಾಮಾನ್ಯವಾಗಿ ಪ್ರಚಲಿತವಿರುವ ವ್ಯಾಖ್ಯಾನವು ವಸ್ತುವಿಷಯ ಮತ್ತು ವಿಧಾನಗಳೆರಡರಲ್ಲೂ ಒಂದು ನಿಶ್ಚಿತ ಸಮಗ್ರತೆಯನ್ನೂ ಮತ್ತು ಆತ್ಯಂತಿಕತೆ(ultimateness)ಯನ್ನೂ ಸೂಚಿಸುತ್ತದೆಂದು ನಾವು ನಿರೀಕ್ಷಿಸಬಹುದಾಗಿದೆ. ವಸ್ತುವಿಷಯಕ್ಕೆ ಸಂಬಂಧಿಸಿದಂತೆ ತತ್ವಶಾಸ್ತ್ರವು ಸಮಗ್ರವಾದ ಗ್ರಹಿಕೆಯ, ಅರಿವಿನ ಪ್ರಯತ್ನವಾಗಿದೆ; ಅಂದರೆ ಪ್ರಪಂಚದ ಮತ್ತು ಬದುಕಿನ ವಿವಿಧ ವಿವರಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ ಒಂದು ಏಕೈಕ, ಸಮಸ್ತ ಪೂರ್ಣತೆಗೆ ತರುವುದಾಗಿದೆ. ಆ ವಿವರಗಳು ಒಂದೋ ಸಮಗ್ರವಾದುದಾಗಿರಬಹುದು ಇಲ್ಲವೇ ದ್ವಿಮಾನ ಪದ್ಧತಿಗಳಲ್ಲಿರುವಂತೆ ಬಹುತ್ವದ ವಿವರಗಳನ್ನು ಒಂದು ಸಣ್ಣ ಸಂಖ್ಯೆಯ ಆತ್ಯಂತಿಕ ತತ್ವಗಳನ್ನಾಗಿಸಿರಬಹುದು. ಮತ್ತೊಂದೆಡೆ, ತತ್ವಶಾಸ್ತ್ರಜ್ಞರಲ್ಲಿ ಮತ್ತು ಅವರ ನಿರ್ಣಯಗಳನ್ನು ಸ್ವೀಕರಿಸುವವರಲ್ಲಿ ಅನುಭವದ ಬಗೆಗೆ ಒಂದು ಸಮಗ್ರ, ಏಕೀಕೃತ, ಸಮಂಜಸ ಮತ್ತು ಪರಿಪೂರ್ಣ ದೃಷ್ಟಿಕೋನವನ್ನು ಸಾಧ್ಯವಾದಷ್ಟು ಮಟ್ಟಿಗೆ ಪಡೆಯುವ ಪ್ರಯತ್ನವಿರುತ್ತದೆ. ಈ ಸಂಗತಿ ತತ್ವಶಾಸ್ತ್ರ/ದರ್ಶನ ಅಂದರೆ ಜ್ಞಾನಜ್ಞಾನದ ಪ್ರೇಮ ( love of wisdom) ಎಂಬ ಮಾತಿನಲ್ಲಿ ಅಭಿವ್ಯಕ್ತವಾಗುತ್ತದೆ. ತತ್ವಶಾಸ್ತ್ರ ಎಂಬುದನ್ನು ಗಂಭೀರವಾಗಿ ತೆಗೆದುಕೊಂಡಾಗಲೆಲ್ಲಾ ಅದು ಜೀವನದ ನಡತೆಯನ್ನು(ಒಳ್ಳೆಯದಾಗಿ) ಪ್ರಭಾವಿಸುವಂತಹ ಜ್ಞಾನವನ್ನು ನೀಡುವಂತಹುದು ಎಂದೇ ಪರಿಭಾವಿಸಲಾಗಿದೆ. ಎಲ್ಲಾ ಪ್ರಾಚೀನ ತಾತ್ವಿಕ ಪಂಥಗಳು ವ್ಯವಸ್ಥಿತ ಜೀವನಮಾರ್ಗಗಳೂ ಆಗಿದ್ದವು; ಅವುಗಳ ತತ್ವಗಳನ್ನು ನಿರ್ದಿಷ್ಟ ನಡಾವಳಿಗಳನ್ನು ರೂಪಿಸಲು ಸ್ವೀಕರಿಸಲಾಗುತ್ತಿತ್ತು ಎಂಬುದು ಕಂಡು ಬರುತ್ತದೆ. ಇದಕ್ಕೆ ಸಾಕ್ಷಿ ಎಂದರೆ ಮಧ್ಯಯುಗದ ರೋಮನ್ ಚರ್ಚ್ ನ ಧರ್ಮಶಾಸ್ತ್ರಕ್ಕೆ ತತ್ವಶಾಸ್ತ್ರದೊಂದಿಗಿದ್ದ ಸಂಬಂಧ, ಧಾರ್ಮಿಕ ಹಿತಾಸಕ್ತಿಯೊಂದಿಗೆ ತತ್ವಶಾಸ್ತ್ರಕ್ಕೆ ಇದ್ದ ಸಂಬಂಧ, ಮತ್ತು ರಾಷ್ಟ್ರೀಯ ಬಿಕ್ಕಟ್ಟಿನ ಸಮಯದಲ್ಲಿ ರಾಜಕೀಯ ಹೋರಾಟಗಳೊಂದಿಗೆ ಅದಕ್ಕಿದ್ದ ಸಂಬಂಧ.

ಹೀಗೆ ಬದುಕಿನ ಬಗೆಗಿನ ದೃಷ್ಟಿಕೋನದೊಂದಿಗೆ ತತ್ವಶಾಸ್ತ್ರಕ್ಕೆ ಇದ್ದ ನೇರ ಮತ್ತು ನಿಕಟ ಸಂಪರ್ಕದಿಂದಾಗಿ ತತ್ವಶಾಸ್ತ್ರವು ವಿಜ್ಞಾನದಿಂದ ಸ್ಪಷ್ಟವಾಗಿಯೇ ಭಿನ್ನವಾಗುತ್ತದೆ. ವಿಜ್ಞಾನದ ನಿರ್ದಿಷ್ಟ ವಸ್ತುಸ್ಥಿತಿ (facts)ಗಳು ಮತ್ತು ನಿಯಮಗಳು ವರ್ತನೆಯನ್ನು ಪ್ರಭಾವಿಸುತ್ತವೆ ನಿಜ. ಅವು ಏನನ್ನು ಮಾಡಬೇಕು, ಮಾಡಬಾರದು ಎನ್ನುವುದನ್ನು ಸೂಚಿಸುತ್ತಾ, ಮಾಡುವ ಪರಿಕರವನ್ನು ಒದಗಿಸುತ್ತವೆ. ಯಾವಾಗ ವಿಜ್ಞಾನವು ಪ್ರಪಂಚದ ಬಗೆಗೆ ಕಂಡುಹಿಡಿಯಲಾದ ವಸ್ತುಸ್ಥಿತಿಗಳ ಕೇವಲ ವರದಿಯಾಗದೆ, ಪ್ರಪಂಚದ ಬಗೆಗೆ ಒಂದು ದೃಷ್ಟಿಕೋನವಾಗುತ್ತದೆಯೋ ( ಮಾಡಬೇಕಾದ ವಿಶೇಷ

ಸಂಗತಿಗಳಿಗಿಂತ ಭಿನ್ನವಾಗಿ), ಆಗ ಅದು ತತ್ವಶಾಸ್ತ್ರದೊಂದಿಗೆ ಒಂದಾಗುತ್ತದೆ. ಅದರ ಆಂತರ್ಯದ ನಿಲುವು ಪ್ರತಿನಿಧಿಸುವ ದೃಷ್ಟಿಕೋನವು ಇದು ಅಥವಾ ಅದು ಎನ್ನುವುದಕ್ಕೆ ಅಥವಾ ತಿಳಿದಿರುವ ಸಂಗತಿಗಳ ಒಂದು ಸರಾಸರಿಗೆ ಮಿತವಾಗಿರುವುದಿಲ್ಲ. ಅದು ಪ್ರತಿನಿಧಿಸುವುದು ನಡತೆಯನ್ನು ಅಥವಾ ವರ್ತನೆಗಳನ್ನು ಪ್ರಭಾವಿಸುವ ಪರಿಗಣನೆಗಳನ್ನು.

ಆದ್ದರಿಂದ ತತ್ವಶಾಸ್ತ್ರ ಎನ್ನುವುದನ್ನು ಕೇವಲ ವಸ್ತುವಿಷಯದ ಪಕ್ಷದಿಂದ ವ್ಯಾಖ್ಯಾನ ಮಾಡಲಾಗುವುದಿಲ್ಲ. ಈ ಕಾರಣದಿಂದಾಗಿ ಸಾಧಾರಣೀಯತೆ(generality), ಸಮಗ್ರತೆ /ಸಂಪೂರ್ಣತೆ (totality ) ಮತ್ತು ಆತ್ಯಂತಿಕತೆ( ultimateness) ಎಂಬಂತಹ ಪರಿಕಲ್ಪನೆಗಳ ವ್ಯಾಖ್ಯಾನಗಳನ್ನು ಈ ಪರಿಕಲ್ಪನೆಗಳು ಸೂಚಿಸುವ ಜಗತ್ತಿನ ಬಗೆಗಿನ ನಿಲುವಿನ ಪಕ್ಷದಿಂದ ಅತ್ಯಂತ ಸರಾಗವಾಗಿ ತಲುಪಬಹುದು. ಯಾವುದೇ ವಾಚ್ಯಾರ್ಥದಲ್ಲಿ ಅಥವಾ ಪರಿಮಾಣಾತ್ಮಕ (quantitative) ಅರ್ಥದಲ್ಲಿ ಈ ನುಡಿಗಳು ಜ್ಞಾನದ ವಸ್ತುವಿಷಯಕ್ಕೆ ಅನ್ವಯಿಸುವುದಿಲ್ಲ. ಏಕೆಂದರೆ ಪರಿಪೂರ್ಣತೆ ಅಥವಾ ಅಂತಿಮತೆ ಎನ್ನುವುದು ಇಲ್ಲಿ ಅನ್ವಯವಾಗದ ಸಂಗತಿಗಳು. ಅನುಭವದ ಚಲನಶೀಲ, ಪರಿವರ್ತನಶೀಲ ಸ್ವರೂಪವೇ ಅಂತಹ ವಿಚಾರವನ್ನು(ಪರಿಪೂರ್ಣತೆ ಅಥವಾ ಅಂತಿಮತೆ ಎನ್ನುವುದನ್ನು) ಹೊರಗಿಡುತ್ತದೆ. ಸ್ವಲ್ಪಮಟ್ಟಿಗೆ ಕಡಿಮೆಯ ಅನಮ್ಯತೆ( not rigid) ಯಲ್ಲಿ ಈ ಸಂಗತಿಗಳು ತತ್ವಶಾಸ್ತ್ರಕ್ಕಿಂತ ವಿಜ್ಞಾನಕ್ಕೆ ಹೆಚ್ಚು ಅನ್ವಯವಾಗುತ್ತವೆ. ಸ್ಪಷ್ಟವಾಗಿಯೇ ಪ್ರಪಂಚದ ವಾಸ್ತವಾಂಶಗಳ( facts ) ಅರಿವಿಗೆ ನಾವು ಪ್ರವೇಶಿಸಬೇಕಾದುದು ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಮಾನವಶಾಸ್ತ್ರ, ಇತಿಹಾಸ ಮುಂತಾದ ವಿಷಯಗಳನ್ನೇ ಹೊರತು ತತ್ವಶಾಸ್ತ್ರವನ್ನಲ್ಲ. ಪ್ರಪಂಚದ ಬಗೆಗೆ ಎಂತಹ ಸಾಧಾರಣೀಕರಣಗಳು ಸಮರ್ಥನೀಯ ಮತ್ತು ಅವು ಏನು ಎಂದು ಹೇಳುವುದು ವಿಜ್ಞಾನದ ಕೆಲಸ. ಆದರೆ ವೈಜ್ಞಾನಿಕ ಶೋಧಗಳು ನಮ್ಮಿಂದ ಈ ಜಗತ್ತಿಗೆ ಯಾವ ರೀತಿಯ ಶಾಶ್ವತ ಕ್ರಿಯಾತ್ಮಕ ಸ್ಪಂದನೆಯನ್ನು ಬೇಡುತ್ತವೆ ಎಂದು ಕೇಳಿದರೆ ನಾವು ಒಂದು ತಾತ್ವಿಕ ಪ್ರಶ್ನೆಯನ್ನು ಎತ್ತುತ್ತಿರುತ್ತೇವೆ.

ಈ ದೃಷ್ಟಿಯಿಂದ "ಸಂಪೂರ್ಣತೆ" ಎನ್ನುವುದು ಪರಿಮಾಣಾತ್ಮಕ ( quantitative ) ಸಂಕಲನದ ಹತಾಶ ಕೆಲಸವಲ್ಲ. ಬದಲಾಗಿ ಅದು ಜರುಗುವ ಘಟನೆಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆಯ ವಿಧಾನದ ಸ್ಥಾಯಿತ್ವ( consistency)ವಾಗಿದೆ. ಸ್ಥಾಯಿತ್ವ ಎಂದರೆ ವಾಚ್ಯ ಅನನ್ಯತೆ (literal identity ) ಅಲ್ಲ;

ಏಕೆಂದರೆ ಒಂದೇ ಘಟನೆ ಎರಡು ಬಾರಿ ನಡೆಯುವುದಿಲ್ಲ. ಒಂದು ಪ್ರತಿಕ್ರಿಯೆಯ ನಿಖರವಾದ ಪುನರಾವರ್ತನೆ ಎಂದರೆ ಅದರಲ್ಲಿ ಏನೋ ಹೊಂದಾಣಿಕೆಯ ದೋಷವಿರುತ್ತದೆ. ಸಂಪೂರ್ಣತೆ ಎಂದರೆ ಮುಂದುವರಿಕೆ, ಸಾತತ್ಯ. ಅದು ಒಂದು ಕ್ರಿಯೆಯ ಅಭ್ಯಾಸವನ್ನು ಜೀವಂತವಾಗಿರಿಸಲು ಮತ್ತು ವೃದ್ಧಿಸಲು ಬೇಕಾದ ಕ್ರಿಯೆಯ ಮರು ಹೊಂದಾಣಿಕೆ ಮಾಡಿಕೊಳ್ಳುವುದು. ಸಂಪೂರ್ಣತೆ ಸಿದ್ಧ ಸಂಪೂರ್ಣ ಕ್ರಿಯಾಯೋಜನೆಯನ್ನು ಸೂಚಿಸುವುದಿಲ್ಲ. ಅದು ಅನೇಕ ವೈವಿಧ್ಯಮಯ ಕ್ರಿಯೆಗಳ ಪರಸ್ಪರ ಮಹತ್ವದ ಕೊಡುಕೊಳ್ಳುವಿಕೆಯ ಲ್ಲಿ ಸಮತೋಲನವನ್ನು ಕಾಯುವುದು. ಹೊಸ ಗ್ರಹಿಕೆಗಳಿಗೆ ಸೂಕ್ಷ್ಮಜ್ಞರೂ ತರೆದ ಮನಸ್ಸಿನವರೂಆಗಿದ್ದು, ಅವುಗಳನ್ನು ಸಂಯೋಜಿಸುವುದರಲ್ಲಿ ಏಕಾಗ್ರತೆ ಮತ್ತು ಜವಾಬ್ದಾರಿಯನ್ನು ಹೊಂದಿರುವ ವ್ಯಕ್ತಿಗಳಿಗೆ ಒಂದು ತಾತ್ವಿಕ ಮನೋಭಾವವಿರುತ್ತದೆ. ತತ್ವಶಾಸ್ತ್ರದ ಒಂದು ಪ್ರಸಿದ್ಧ ಅರ್ಥ ಎಂದರೆ ಕಷ್ಟನಷ್ಟಗಳ ಇದಿರಿನಲ್ಲಿ ಶಾಂತತೆ ಮತ್ತು ಸಹಿಷ್ಣುತೆ; ಅದು ಗೊಣಗುವಿಕೆ ಇಲ್ಲದೆ ನೋವನ್ನು ಸಹಿಸುವ ಶಕ್ತಿ ಎಂದೂ ಭಾವಿಸಲಾಗುತ್ತದೆ. ಈ ಅರ್ಥವು ಸ್ಥಿತಪ್ರಜ್ಞ ದರ್ಶನ( stoic philosophy)ಕ್ಕೆ ನೀಡುವ ಒಂದು ಹೆಗ್ಗಳಿಕೆ(tribute) ಯೇ ಹೊರತು ತತ್ವಶಾಸ್ತ್ರದ ಸಾಮಾನ್ಯ ಲಕ್ಷಣವಲ್ಲ. ಆದರೆ ಅದು ತತ್ವಶಾಸ್ತ್ರದ ಸಂಪೂರ್ಣತೆಯ ಗುಣವನ್ನು ಅನುಭವಗಳ ಅಹಿತಕರ ಏರಿಳಿತಗಳಲ್ಲೂ ಒಂದು ಕಲಿಯುವ ಅಥವಾ ಅರ್ಥವನ್ನು ಶೋಧಿಸುವ ಶಕ್ತಿ ಎಂದು ಸೂಚಿಸುವುದರಲ್ಲಿದೆ ಮತ್ತು ಕಲಿತುದದನ್ನು ನಿರಂತರ ಕಲಿಯುವ ಸಾಮರ್ಥ್ಯದಲ್ಲಿ ಒಳಗೊಳ್ಳುವ ಶಕ್ತಿ ಎನ್ನುವುದರಲ್ಲಿದೆ. ಆ ಅರ್ಥವು ತತ್ವಶಾಸ್ತ್ರದ ಎಲ್ಲಾ ಯೋಜನೆಗಳಲ್ಲೂ ಸಮರ್ಥನೀಯವಾಗುತ್ತದೆ. ತತ್ವಶಾಸ್ತ್ರದ ಸಾಧಾರಣೀಕರಣ(generalisation) ಮತ್ತು ಆತ್ಯಂತಿಕತೆ ( ultimateness)ಗಳಿಗೆ ಒಂದು ಸದೃಶ(analogous) ವ್ಯಾಖ್ಯಾನ ಅನ್ವಯವಾಗುತ್ತದೆ. ವಾಚ್ಯವಾಗಿ ನೋಡಿದಾಗ ಅವು ಅಸಂಗತ ತೋರಿಕೆಗಳಾಗುತ್ತವೆ; ಮತಿಭ್ರಮಣೆಯನ್ನು ಸೂಚಿಸುತ್ತವೆ. ಅಂತ್ಯ ಎಂದರೆ ಅನುಭವ ಕೊನೆಯಾಗಿದೆ ಅಥವಾ ತೀರಿ ನಿತ್ರಾಣಗೊಂಡಿದೆ ಎಂದಲ್ಲ. ಅದು ಅರ್ಥದ ಆಳಪದರಗಳನ್ನು ಪ್ರವೇಶಿಸುವ ಮನೋಭಾವವಾಗಿದೆ. ಮೇಲ್ಮೈಯಿಂದ ಕೆಳಗೆ ಹೋಗಿ ಘಟನೆಗಳು ಅಥವಾ ವಸ್ತುಗಳ ನಡುವೆ ಸಂಬಂಧಗಳನ್ನು ಕಾಣುವುದು ಮತ್ತು ಅದರಲ್ಲಿ ತೊಡಗುವುದಾಗಿದೆ. ಅದೇ ರೀತಿಯಲ್ಲಿ ಸಾಧಾರಣ ಅರ್ಥದಲ್ಲಿ ತಾತ್ವಿಕ ನಿಲುವು ಎಂದರೆ ಯಾವುದನ್ನೇ ಆದರೂ, ಅದು ಪ್ರತ್ಯೇಕ ಎಂದು

ನೋಡುವುದಕ್ಕೆ ವಿರುದ್ಧವಾದುದು. ಅದು ಒಂದು ಕ್ರಿಯೆಯನ್ನು ಅದರ ಸಂದರ್ಭದಲ್ಲಿ ಇಡಲು ಪ್ರಯತ್ನಿಸುತ್ತದೆ; ಹಾಗೆ ಮಾಡುವುದರಲ್ಲಿ ಆ ಕ್ರಿಯೆಯ ಅರ್ಥ ಅಡಕವಾಗಿದೆ.

ಜ್ಞಾನ ಎನ್ನುವುದಕ್ಕೆ ಭಿನ್ನವಾಗಿ ತತ್ವಶಾಸ್ತ್ರವನ್ನು ಚಿಂತನೆಯೊಂದಿಗೆ ಜೋಡಿಸುವುದು ಸಹಾಯಕರ. ವಿಜ್ಞಾನವೇ ಜ್ಞಾನವಾಗಿದೆ ಅಥವಾ ಸ್ಥಾಪಿತ ಜ್ಞಾನವಾಗಿದೆ. ಅದು (ವಿಜ್ಞಾನ) ದೃಢವಾಗಿ ನೆಲೆಗೊಂಡ, ವ್ಯವಸ್ಥಿತವಾದ ಮತ್ತು ವೈಚಾರಿಕವಾಗಿ ನಿರ್ಧಾರಿತವಾದ ವಸ್ತುಗಳನ್ನ ಸೂಚಿಸುತ್ತದೆ. ಚಿಂತನೆ ಅಥವಾ ಯೋಚಿಸುವುದಾದರೂ ಭವಿಷ್ಯಕ್ಕೆ ಅನ್ವಯವಾಗುವಂಥದು. ಅದು ದೃಢವಾಗಿ ನೆಲೆಗೊಳ್ಳದ ನೆಲೆಯಿಂದ ಮೂಡಿ ಅಸ್ಥಿರತೆಯನ್ನು ನಿವಾರಿಸುವ ಉದ್ದೇಶ ಹೊಂದಿರುತ್ತದೆ. ತತ್ವಶಾಸ್ತ್ರ ಎಂದರೆ ಅರಿವಿಗೆ ದಕ್ಕಿರುವುದು ನಮ್ಮ ಮೇಲೆ ಮಾಡುವ ಚಿಂತನೆಯ ಬೇಡಿಕೆ. ಈಗಾಗಲೇ ತಿಳಿದಿರುವ ಸಂಗತಿ ನಮ್ಮಿಂದ ಏನನ್ನು ಬೇಡುತ್ತದೋ ಬೇಡುವ ಪ್ರತಿಸ್ಪಂದನೆಯ ನಿಲುವು ತತ್ವಶಾಸ್ತ್ರವಾಗಿದೆ. ತತ್ವಶಾಸ್ತ್ರವು ಏನು ಸಾಧ್ಯ ಎಂಬ ವಿಚಾರವನ್ನು ವಿವೇಚಿಸುತ್ತದೆಯೇ ಹೊರತು, ಈಗಾಗಲೇ ಸಾಧಿಸಿರುವುದರ ಸಂಗತಿಗಳ ಒಂದು ದಾಖಲೆ ಅಲ್ಲ. ಆದ್ದರಿಂದ ಎಲ್ಲಾ ಆಲೋಚನೆಗಳಂತೆ ತತ್ವಶಾಸ್ತ್ರವೂ ಸಹ ಪೂರ್ವಸಿದ್ಧಾಂತದ ಗುಣ ಹೊಂದಿರುತ್ತದೆ. ತತ್ವಶಾಸ್ತ್ರ ಮಾಡಬೇಕಾದುದರ, ಪ್ರಯತ್ನಿಸಬೇಕಾದುದರ ಕಾರ್ಯನಿರ್ದೇಶನವಾಗಿದೆ. ಅದರ ಮೌಲ್ಯವಿರುವುದು ಪರಿಹಾರಗಳನ್ನು ನೀಡುವುದರಲ್ಲಿ ಅಲ್ಲ. (ಪರಿಹಾರಗಳನ್ನುಕ್ರಿಯೆಯ ಮೂಲಕ ಮಾತ್ರ ನೀಡಬಹುದು) ಕಠಿಣತೆಗಳನ್ನು, ಕ್ಲಿಷ್ಟತೆಗಳನ್ನು ನಿರ್ಧರಿಸುವುದರಲ್ಲಿ ಮತ್ತು ಅವುಗಳೊಂದಿಗೆ ವ್ಯವಹರಿಸುವ ವಿಧಾನಗಳನ್ನು ಸೂಚಿಸುವುದರಲ್ಲಿ ತತ್ವಶಾಸ್ತ್ರದ ಮೌಲ್ಯವಿದೆ. ತತ್ವಶಾಸ್ತ್ರವನ್ನು ತನ್ನ ಬಗೆಗೇ ಪ್ರಜ್ಞಾಪೂರ್ಣವಾಗಿರುವ ಚಿಂತನೆ ಎಂದು ವಿವರಿಸಬಹುದು. ಆ ಚಿಂತನೆ ತನ್ನ ಸ್ಥಾನ, ಕಾರ್ಯ ಮತ್ತು ಮೌಲ್ಯವನ್ನು ಅನುಭವದಲ್ಲಿ ಸಾಧಾರಣೀಕರಿಸಿರುತ್ತದೆ.

ಹೆಚ್ಚು ನಿರ್ದಿಷ್ಟವಾಗಿ ಹೇಳಬೇಕೆಂದರೆ, ಒಂದು "ಪೂರ್ಣ" ನಿಲುವಿನ ಬೇಡಿಕೆ ಏಕೆ ಉಂಟಾಗುತ್ತದೆ ಎಂದರೆ ಬದುಕಿನ ವಿವಿಧ ಸಂಘರ್ಷಮಯ ಹಿತಾಸಕ್ತಿಗಳನ್ನು ಕ್ರಿಯೆಯಲ್ಲಿ ಒಂದುಗೂಡಿಸುವ ಅಗತ್ಯವಿರುತ್ತದೆ. ಹಿತಾಸಕ್ತಿಗಳು ತೀರಾ ಮೇಲ್ಮೈನದ್ದಾಗಿದ್ದು, ಒಂದರಿಂದ ಇನ್ನೊಂದಕ್ಕೆ ಸುಲಭವಾಗಿ ಜಾರುವಂತೆ ಇದ್ದರೆ, ಅವು ಪರಸ್ಪರ ಸಂಘರ್ಷಕ್ಕೆ ಬರುವಷ್ಟು ಪ್ರಮಾಣದಲ್ಲಿ ವ್ಯವಸ್ಥಿತಗೊಂಡಿಲ್ಲದಿದ್ದರೆ, ಅಂತಹ ಕಡೆಗಳಲ್ಲಿ ತತ್ವಶಾಸ್ತ್ರದ ಅಗತ್ಯ ಗೋಚರಿಸುವುದಿಲ್ಲ. ಆದರೆ

ವೈಜ್ಞಾನಿಕ ಹಿತಾಸಕ್ತಿ ಧರ್ಮದೊಂದಿಗೆ, ಆರ್ಥಿಕ ಹಿತಾಸಕ್ತಿ ವಿಜ್ಞಾನ ಅಥವಾ ಸೌಂದರ್ಯಮೀಮಾಂಸೆಯೊಂದಿಗೆ ಘರ್ಷಣೆಯಲ್ಲಿದ್ದರೆ; ವ್ಯವಸ್ಥೆಯ ಬಗೆಗಿನ ವ್ಯವಸ್ಥಾಪಾಲಕ ಕಾಳಜಿ ಸ್ವಾತಂತ್ರ್ಯದ ಪ್ರಗತಿಗಾಮೀ ಕಳಕಳಿಯೊಂದಿಗೆ ಹೊಂದಾಣಿಕೆಯಾಗದಿದ್ದರೆ,; ವೈಯಕ್ತಿಕತೆಯು ಸಾಂಸ್ಥಿಕತೆಯೊಂದಿಗೆ ಘರ್ಷಣೆಯಲ್ಲಿದ್ದರೆ; ಒಂದು ವ್ಯಾಪಕವಾದ ದೃಷ್ಟಿಕೋನವನ್ನು ಕಾಣುವ ಪ್ರೇರಣೆ ಮೂಡುತ್ತದೆ. ಅಂತಹ ವಿಸ್ತೃತ, ವ್ಯಾಪಕವಾದ ದೃಷ್ಟಿಕೋನದ ಮೂಲಕ ಭಿನ್ನತೆಗಳನ್ನು ಒತ್ತಟ್ಟಿಗೆ ತರಬಹುದು; ಅನುಭವದ ಸಮಂಜಸತೆ ಮತ್ತು ಸಾತತ್ಯಗಳನ್ನು ಮರಳಿ ಪಡೆಯಬಹುದು. ಈ ಘರ್ಷಣೆಗಳನ್ನು ಒಬ್ಬ ವ್ಯಕ್ತಿ ತನ್ನಲ್ಲೇ ನಿವಾರಿಸಿಕೊಳ್ಳ ಬಹುದು. ಆಗ ಗುರಿಗಳ ಸಂಘರ್ಷದ ಕ್ಷೇತ್ರ ಒಬ್ಬ ವ್ಯಕ್ತಿಗೇ ಸೀಮಿತವಾಗಿರುತ್ತದೆ. ಆಗ ಆ ವ್ಯಕ್ತಿ ತನ್ನದೇ ಒರಟು ಹೊಂದಾಣಿಕೆಗಳನ್ನು ನಿಭಾಯಿಸಿಕೊಳ್ಳುತ್ತಾನೆ. ಇಂತಹ ಮನೆಯಂಗಳದ, ಮನದಂಗಳದ ತತ್ವಶಾಸ್ತ್ರಗಳು, ದರ್ಶನಗಳು, ಪ್ರಾಮಾಣಿಕವೂ, ಸಮರ್ಪಕವೂ ಆಗಿರುತ್ತವೆ. ಆದರೆ ಅವು ತತ್ವಶಾಸ್ತ್ರೀಯ ಪದ್ಧತಿಗಳಾಗುವುದಿಲ್ಲ, ಪಂಥಗಳಾಗುವುದಿಲ್ಲ. ಯಾವಾಗ ಭಿನ್ನ ಆದರ್ಶಗಳ ಬೇಡಿಕೆಗಳು ಒಂದು ಸಮುದಾಯವನ್ನೇ ಆವರಿಸುತ್ತವೋ, ಮತ್ತು ಹೊಂದಾಣಿಕೆಯ ಅಗತ್ಯ ಎಲ್ಲರಿಗೂ ಉಂಟಾಗುತ್ತದೋ ಆಗ ತಾತ್ವಿಕ ಪದ್ಧತಿಗಳು, ಪಂಥಗಳು ಆವಿರ್ಭವಿಸುತ್ತವೆ.

ಈ ಗುಣಗಳು ತತ್ವಶಾಸ್ತ್ರದ ಬಗೆಗಿರುವ ಆಕ್ಷೇಪಣೆಗಳನ್ನು ವಿವರಿಸುತ್ತವೆ. ಈ ಆಕ್ಷೇಪಣೆಗಳೆಂದರೆ ತತ್ವಶಾಸ್ತ್ರಗಳಲ್ಲಿ ವೈಯಕ್ತಿಕ ಚಿಂತನೆಯ ಪಾತ್ರ, ತತ್ವಶಾಸ್ತ್ರಗಳ ವಿವಾದಾತ್ಮಕ ವೈವಿಧ್ಯ, ಮತ್ತು ತತ್ವಶಾಸ್ತ್ರವು ಪುನರಾವರ್ತಿತವಾಗಿ ಅದೇ ಅದೇ ಪ್ರಶ್ನೆಗಳನ್ನು ಬೇರೆ ಬೇರೆ ಮಾತುಗಳಲ್ಲಿ ಕೇಳುತ್ತದೆ ಎಂಬುದು. ನಿಸ್ಸಂಶಯವಾಗಿ ಈ ಸಂಗತಿಗಳು ಹೆಚ್ಚೂ ಕಡಿಮೆ ಚಾರಿತ್ರಿಕ ತತ್ವಶಾಸ್ತ್ರಗಳ ಲಕ್ಷಣಗಳಾಗಿವೆ. ಆದರೆ ಅವು ತತ್ವಶಾಸ್ತ್ರದ ಬಗೆಗಿರುವ ಆಕ್ಷೇಪಣೆಗಳಲ್ಲ; ಅವು ಮನುಷ್ಯ ಸ್ವಭಾವದ ಬಗೆಗಿನ ಮತ್ತು ಮನುಷ್ಯ ಸ್ವಭಾವದ ವೇದಿಕೆಯಾದ ಈ ಪ್ರಪಂಚದ ಬಗೆಗಿನ ಆಕ್ಷೇಪಣೆಗಳು. ಬದುಕಿನಲ್ಲಿ ನೈಜ ಅನಿಶ್ಚಿತತೆಗಳಿದ್ದರೆ ತತ್ವಶಾಸ್ತ್ರಗಳು ಆ ಅನಿಶ್ಚಿತತೆಗಳನ್ನು ಕುರಿತು ಚಿಂತಿಸಬೇಕು. ಒಂದು ವೇಳೆ ಈ ಸಮಸ್ಯೆಯ ಕಾರಣಗಳ ನ್ನು ಭಿನ್ನವಾಗಿ ಶೋಧನೆ ಮಾಡಿದರೆ, ಮತ್ತು ಅದನ್ನು ನಿಭಾಯಿಸುವ ಪ್ರಸ್ತಾಪಗಳು ಭಿನ್ನವಾಗಿದ್ದರೆ, ಅಥವಾ ಹಿತಾಸಕ್ತಿಗಳ ಸಂಘರ್ಷಗಳು ಹೆಚ್ಚೂ ಕಡಿಮೆ ವಿಭಿನ್ನ ಗುಂಪುಗಳಲ್ಲಿ ಮೈದಳೆದಿದ್ದರೆ ಆಗ ವಿಭಿನ್ನ ಮಾರ್ಗದ ಸ್ಪರ್ಧಾತ್ಮಕ ತತ್ವಶಾಸ್ತ್ರಗಳಿರಬೇಕಾಗುತ್ತದೆ. ಈಗಾಗಲೇ ಸಂಭವಿಸಿರುವುದರ ವಿಷಯದಲ್ಲಿ ಹೊಂದಾಣಿಕೆ ಮತ್ತು

ನಿಶ್ಚಿತತೆಯನ್ನು ತರಲು ಬೇಕಾಗಿರುವುದು ಸಮರ್ಪಕ ಪುರಾವೆ ಮಾತ್ರ. ಸಂಗತಿ ಖಚಿತವಾಗಿಯೇ ಇರುತ್ತದೆ. ಆದರೆ ಒಂದು ಸಂಕೀರ್ಣ ಸಂದರ್ಭದಲ್ಲಿ ಏನು ಮಾಡಬೇಕು ಎಂಬ ಪ್ರಶ್ನೆ ಬಂದಾಗ ಸಂಗತಿ ಇನ್ನೂ ಅನಿಶ್ಚಿತವಾದುದರಿಂದ ಚರ್ಚೆ ಅನಿವಾರ್ಯ. ಒಂದು ಸುಖಕರ ಜೀವನ ನಡೆಸುತ್ತಿರುವ ಆಳುವ ವರ್ಗವು ಅಸ್ತಿತ್ವಕ್ಕಾಗಿ ಹೋರಾಟ ನಡೆಸುತ್ತಿರುವ ವರ್ಗದ ದರ್ಶನವನ್ನೇ ಹೊಂದಿರಬೇಕು ಎಂದು ನಿರೀಕ್ಷಿಸಲಾಗದು. ಉಳ್ಳವರು ಮತ್ತು ವಂಚಿತರು ಪ್ರಪಂಚದ ಬಗೆಗೆ ಒಂದೇ ಆದ ಮೂಲಭೂತ ನಿಲುವನ್ನು ಹೊಂದಿದ್ದಾರೆ ಎಂದರೆ ಆ ಮಾತು ಅಪ್ರಾಮಾಣಿಕವಾದುದು ಅಥವಾ ಹಗುರವಾದುದು ಎಂದಾಗುತ್ತದೆ. ಔದ್ಯೋಗಿಕ ಗುರಿಗಳಿಗೆ ಬದ್ಧವಾಗಿ, ವ್ಯಾಪಾರ, ವಾಣಿಜ್ಯ ಕ್ಷೇತ್ರಗಳಲ್ಲಿ ಕ್ರಿಯಾತ್ಮಕವಾಗಿರುವ ಒಂದು ಸಮುದಾಯವು ಬದುಕಿನ ಅಗತ್ಯ ಮತ್ತು ಸಾಧ್ಯತೆಗಳನ್ನುನೋಡುವ ರೀತಿಯೇ ಬೇರೆ. ಒಂದು ಸಂಸ್ಕೃತಿ ಉನ್ನತ ಸೌಂದರ್ಯೋಪಾಸಕ ಗುಣವನ್ನು ಹೊಂದಿದ್ದು, ಪ್ರಾಕೃತಿಕ ಶಕ್ತಿಗಳನ್ನು ಯಾಂತ್ರಿಕ ಲೆಕ್ಕಾಚಾರಗಳಿಗೆ ಪರಿವರ್ತಿಸುವ ಉದ್ಯಮಶೀಲತೆಯಲ್ಲಿ ಚುರುಕಲ್ಲದ ಇನ್ನೊಂದು ಸಮುದಾಯ ಬದುಕಿನ ಅಗತ್ಯ ಮತ್ತು ಸಾಧ್ಯತೆಗಳನ್ನುನೋಡುವ ರೀತಿಯೇ ಬೇರೆ. ಒಂದು ನಿರಂತರ ಐತಿಹಾಸಿಕ ಹಿನ್ನೆಲೆಯ ಒಂದು ಸಾಮಾಜಿಕ ಗುಂಪು ಜೀವನದ ಒಂದು ಬಿಕ್ಕಟ್ಟಿಗೆ ಯಾವ ಮನೋಭಾವದಿಂದ ಎದುರಾಗುತ್ತದೋ, ಅದೇ ರೀತಿಯಲ್ಲಿ ತನ್ನ ಇತಿಹಾಸದಲ್ಲಿ ಅನಿರೀಕ್ಷಿತ ಬಿರುಕುಗಳ ಆಘಾತಗಳನ್ನು ಕಂಡಿರುವ ಇನ್ನೊಂದು ಸಮುದಾಯ ಎದುರಾಗದು. ಒಂದು ವೇಳೆ ಆ ಎರಡೂ ಸಮುದಾಯಗಳಿಗೆ ಲಭ್ಯವಿರುವ ದತ್ತಾಂಶ(data) ಒಂದೇ ಆದರೂ ಆ ಸಮುದಾಯಗಳು ಆ ದತ್ತಾಂಶಗಳನ್ನು ಮೌಲ್ಯಮಾಪನ ಮಾಡುವ ರೀತಿ ಬೇರೆ ಬೇರೆಯಾಗುತ್ತದೆ. ಜೀವನದ ವಿಭಿನ್ನ ರೀತಿಗಳಲ್ಲಿ ಎದುರಾಗುವ ಅನುಭವಗಳು ಒಂದೇ ರೀತಿಯ ದತ್ತಾಂಶಗಳ ಸಾಧ್ಯತೆಯನ್ನು ಹೊಂದಿರುವುದಿಲ್ಲ ಮತ್ತು ವಿಭಿನ್ನ ಮೌಲ್ಯ ಯೋಜನೆಗಳಿಗೆ ಕರೆದೊಯ್ಯುತ್ತವೆ. ಸಮಸ್ಯೆಗಳ ಹೋಲುವಿಕೆ ಹೊರನೋಟಕ್ಕೆ ನಿಜವೇ ಹೊರತು ವಾಸ್ತವಿಕವಾದುದಲ್ಲ. ಇಲ್ಲಿ ಹಳೆಯ ಚರ್ಚೆಗಳನ್ನು ಸಮಕಾಲೀನ ಗೊಂದಲಗಳಿಗೆ ಪರಿವರ್ತಿಸುವ ಪರಿಣಾಮವಿದೆ, ಆದರೆ ಕೆಲವು ಮೂಲಭೂತ ಸ್ವರೂಪಗಳಲ್ಲಿ ಜೀವನದ ಅವುಗಳೇ ಆದ ಅಪರಿಹಾರ್ಯ ಬಿಕ್ಕಟ್ಟುಗಳು ಪುನರಾವರ್ತನೆಗೊಳ್ಳುತ್ತವೆ. ಅವುಗಳಲ್ಲಿ ಇರುವ ಬದಲಾವಣೆ ಎಂದರೆ ವಿಜ್ಞಾನದ ಬೆಳವಣಿಗೆಯನ್ನೂ ಒಳಗೊಳ್ಳುವ ಸಾಮಾಜಿಕ ಸಂದರ್ಭದ ಬದಲಾವಣೆ.

ವಸ್ತುಸ್ಥಿತಿ ಎಂದರೆ ತಾತ್ವಿಕ ಸಮಸ್ಯೆಗಳು ಮೂಡುವುದು ವಿಸ್ತೃತವಾದ ಮತ್ತು ವಿಸ್ತಾರವಾಗಿ ಅನುಭವಕ್ಕೆ ಬರುವ ಸಾಮಾಜಿಕ ಆಚರಣೆಗಳ ಮಧ್ಯೆ. . ಆದರೆ ಈ ಅಂಶವು ತತ್ವಶಾಸ್ತ್ರಜ್ಞರು ಒಂದು ತಾಂತ್ರಿಕ ನುಡಿಗಟ್ಟನ್ನು ಪ್ರಯೋಗಿಸುವ ವಿಶೇಷಜ್ಞರು ಎಂಬ ಸಂಗತಿಯಲ್ಲಿ ಮರೆಮಾಚಲ್ಪಟ್ಟಿದೆ. ಆದರೆ ಒಂದು ವ್ಯವಸ್ಥೆ ಪ್ರಭಾವಿಯಾದಾಗ ಒಂದು ಸಾಮಾಜಿಕ ಹೊಂದಾಣಿಕೆಯನ್ನು ಅಪೇಕ್ಷಿಸುವ ಹಿತಾಸಕ್ತಿಗಳ ಸಂಘರ್ಷವನ್ನು ಕಾಣುವುದು ಸಾಧ್ಯ. ಈ ಹಂತದಲ್ಲಿ ತತ್ವಶಾಸ್ತ್ರ ಮತ್ತು ಶಿಕ್ಷಣಕ್ಕೆ ಇರುವ ನಿಕಟ ಸಂಬಂಧ ಕಂಡುಬರುತ್ತದೆ. ನಿಜ ಹೇಳಬೇಕೆಂದರೆ ಶಿಕ್ಷಣವು ಮಾನವಸಂಗತಿಗಳ ಒಳಹೊಕ್ಕು ನೋಡುವ ಒಂದು ಅನುಕೂಲದ ನೆಲೆಯನ್ನು ಒದಗಿಸುತ್ತದೆ. ಈ ನೆಲೆ ತಾತ್ವಿಕ ಚರ್ಚೆಗಳ ಅರ್ಥವಂತಿಕೆಯ ತಾಂತ್ರಿಕತೆಗಿಂತ ಭಿನ್ನವಾದುದು. ತತ್ವಶಾಸ್ತ್ರಕ್ಕೇ ಮೀಸಲಾದ ವಿದ್ಯಾರ್ಥಿಯು ಮಾನವ ಸಮಸ್ಯೆಯನ್ನು ಒಂದು ಚುರುಕಾದ ಮತ್ತು ಬೌದ್ಧಿಕ ಕಸರತ್ತಾಗಿ, ತತ್ವಶಾಸ್ತ್ರಜ್ಞರು ತತ್ವಶಾಸ್ತ್ರಜ್ಞರಿಗಾಗಿಯೇ ಹೇಳಿದ ಸಂಗತಿಯಾಗಿ ತೆಗೆದುಕೊಳ್ಳಬಹುದು. ಆದರೆ ತಾತ್ವಿಕ ಸಂಗತಿಗಳನ್ನು ಅವು ಅನ್ವಯವಾಗುವ ಮಾನಸಿಕ ಸ್ಥಿತಿಯ ನೆಲೆಯಿಂದ ಸಮೀಪಿಸಿದಾಗ ಅಥವಾ ಅವುಗಳನ್ನು ಕ್ರಿಯೆಗೆ ಇಳಿಸಿದಾಗ ಬದಲಾಗುವ ಶೈಕ್ಷಣಿಕ ಆಚರಣೆಯ ದೃಷ್ಟಿಯಿಂದ ನೋಡಿದರೆ, ಅವುಗಳು ಸೂತ್ರೀಕರಿಸುವ ಜೀವನಸಂದರ್ಭಗಳು ನಮ್ಮ ದೃಷ್ಟಿಗೆ ದೂರವಾಗವು. ಒಂದು ಸಿದ್ಧಾಂತ ಶೈಕ್ಷಣಿಕ ಅನುಷ್ಠಾನಕ್ಕೆ ಯಾವ ವ್ಯತ್ಯಾಸವನ್ನೂ ಮಾಡದಿದ್ದರೆ ಆ ಸಿದ್ಧಾಂತ ಕೃತಕವಿರಬೇಕು. ತಾತ್ವಿಕ ಸಮಸ್ಯೆಗಳು ಉಗಮಿಸುವ ಹಾಗೂ ಬೆಳೆಯುವ ನೆಲೆಗಳನ್ನು, ಅವು ಒಂದಾಗುವ ಸನ್ನಿವೇಶವನ್ನು, ಎಲ್ಲಿ ಅವುಗಳ ಸ್ವೀಕಾರ ಅಥವಾ ತಿರಸ್ಕಾರವು ಆಚರಣೆಯಲ್ಲಿ ವ್ಯತ್ಯಾಸವನ್ನು ಉಂಟು ಮಾಡುತ್ತದೆ ಎನ್ನುವುದನ್ನು ಮುಂದಾಗಿ ನೋಡುವುದನ್ನು ಶೈಕ್ಷಣಿಕ ದೃಷ್ಟಿಕೋನವು ಸಾಧ್ಯವಾಗಿಸುತ್ತದೆ.

ಶಿಕ್ಷಣವು ಪ್ರಕೃತಿ ಹಾಗೂ ಸಹಮಾನವರ ಬಗೆಗೆ ನಮ್ಮ ಬೌದ್ಧಿಕ ಹಾಗೂ ಭಾವನಾತ್ಮಕ ನಿಲುವುಗಳನ್ನು ರೂಪಿಸುವ ಪ್ರಕ್ರಿಯೆ ಎನ್ನುವುದಾದರೆ, ತತ್ವಶಾಸ್ತ್ರವನ್ನು ಶಿಕ್ಷಣದ ಒಂದು ಸಾಮಾನ್ಯ(general) ಸಿದ್ಧಾಂತ ಎನ್ನಬಹುದು. ತತ್ವಶಾಸ್ತ್ರವು ಕೇವಲ ಸಾಂಕೇತಿಕ ಅಥವಾ ಶಾಬ್ದಿಕವಲ್ಲದಿದ್ದರೆ, ಕೆಲವೇ ಕೆಲವರ ಭಾವಚಾಪಲ್ಯವಲ್ಲದಿದ್ದರೆ, ಅದೊಂದು ಕೇವಲ ಸ್ವೇಚ್ಛಾನುಸಾರದ ತತ್ವವಲ್ಲದಿದ್ದರೆ, ಅದು ಮಾಡುವ ಹಿಂದಿನ ಅನುಭವಗಳ ವಿಮರ್ಶೆ ಮತ್ತು ಅದರ ಮೌಲ್ಯಯೋಜನೆ ವರ್ತನೆಯಲ್ಲಿ ಪರಿಣಾಮವನ್ನು ಮಾಡಬೇಕು. ಸಾರ್ವಜನಿಕ ಚಳುವಳಿ, ಪ್ರಚಾರ,

ಕಾನೂನಾತ್ಮಕ ಹಾಗೂ ಆಡಳಿತಾತ್ಮಕ ಕ್ರಿಯೆ ಇವುಗಳು ತತ್ವಶಾಸ್ತ್ರವು ಅಪೇಕ್ಷಣೀಯ ಎಂದು ಸೂಚಿಸುವ ಮನೋಭಾವದಲ್ಲಿ, ಧೋರಣೆಯಲ್ಲಿ ಪರಿವರ್ತನೆ ತರಬಲ್ಲವು. ಆದರೆ ಆ ಬದಲಾವಣೆಯನ್ನು ಎಷ್ಟರಮಟ್ಟಿಗೆ ತರಬಲ್ಲವು ಎಂದರೆ ಅವು ಶೈಕ್ಷಣಿಕವಾಗಿರುವ ಮಟ್ಟಿಗೆ; ಮಾನಸಿಕ ಹಾಗೂ ನೈತಿಕ ನಿಲುವುಗಳನ್ನು ಬದಲಾಯಿಸುವ ಮಟ್ಟಿಗೆ. ಉತ್ತಮ ಮಟ್ಟದಲ್ಲಿ ಎಂದರೂ, ಈ ಪರಿವರ್ತನೆಗಳಲ್ಲಿ ಹೊಂದಾಣಿಕೆ ಅನಿವಾರ್ಯವಾಗುತ್ತದೆ. ಏಕೆಂದರೆ ಅವನ್ನು ಯಾರ ಅಭ್ಯಾಸಗಳು, ರೂಢಿಗಳು ಈಗಾಗಲೇ ನಿಗದಿಯಾಗಿರುತ್ತವೋ, ದೃಢವಾಗಿ ನೆಲಸಿರುತ್ತವೋ ಅವರ ನಡುವೆ ತರಬೇಕಾಗುತ್ತದೆ. ಅದೇ ವೇಳೆ ಯುವಜನರ ಶಿಕ್ಷಣವು ಹೆಚ್ಚು ನ್ಯಾಯಯುತ ಮತ್ತು ಹೆಚ್ಚು ಮುಕ್ತವಾದ ಕಾರ್ಯಕ್ಷೇತ್ರವಾಗಿರುತ್ತದೆ. ಶಿಕ್ಷಣದ ಗುರಿಗಳ ಒಂದು ವಿಶಾಲ ಹಾಗೂ ಸಹಾನುಭೂತಿಯುಕ್ತ ಸರ್ವೇಕ್ಷಣೆ( survey)ಯಿಂದ ಜೀವಂತವಾಗುವವರೆಗೆ ಶಿಕ್ಷಣ ಎನ್ನು ವುದು ಕೇವಲ ಒಂದು ರೂಢಿಗತ ಅನುಭವದ ವಿಷಯವಾಗುತ್ತದೆ. ಅಂತಹ ಸರ್ವೇಕ್ಷಣೆಯನ್ನು ಒದಗಿಸುವುದು ತತ್ವಶಾಸ್ತ್ರದ ಕೆಲಸವಾಗಿದೆ.

ಸಕಾರಾತ್ಮಕ ವಿಜ್ಞಾನವು ಯಾವಾಗಲೂ ಸಮುದಾಯವು ಸಾಧಿಸಲು ಕಾಳಜಿ ಹೊಂದಿರುವ ಗುರಿಗಳನ್ನು ಸೂಚಿಸುತ್ತದೆ. ಅಂತಹ ಗುರಿಗಳಿಂದ ಹೊರತಾದಾಗ ಒಂದು ಔದಾಸೀನ್ಯ ತಲೆ ಹಾಕುತ್ತದೆ. ವಿಜ್ಞಾನದ ಆವಿಷ್ಕಾರಗಳನ್ನು ಒಂದು ರೋಗವನ್ನು ಗುಣಪಡಿಸಲು ಬಳಸಲಾಗುತ್ತದೆಯೋ ಅಥವಾ ರೋಗವನ್ನು ಹರಡಲು ಬಳಸಲಾಗುತ್ತದೆಯೋ, ಜೀವನರಕ್ಷಕ ಮಾರ್ಗಗಳನ್ನು ಹೆಚ್ಚಿಸಲು ಬಳಸಲಾಗುತ್ತದೆಯೋ ಅಥವಾ ಮಾನವಕುಲವನ್ನು ಅಳಿಸಿ ಹಾಕುವ ಯುದ್ದ ಸಾಮಗ್ರಿಗಳನ್ನು ಉತ್ಪಾದಿಸಲು ಬಳಸಲಾಗುತ್ತದೆಯೋ ಮುಂತಾದ ಸಂಗತಿಗಳ ಬಗೆಗೆ ಆ ಔದಾಸೀನ್ಯ ಪ್ರಕಟವಾಗುತ್ತದೆ. ಸಮಾಜವು ಈ ದ್ವಿವಿಧ ಸಂಗತಿಗಳಲ್ಲಿ ಒಂದರ ಬಗೆಗೆ ಆಸಕ್ತಿ ವಹಿಸಿದರೆ ವಿಜ್ಞಾನವು ಆ ಆಸಕ್ತಿಯನ್ನು ಈಡೇರಿಸುವುದರತ್ತ ಮಾರ್ಗ ತೋರಿಸುತ್ತದೆ. ಆದ್ದರಿಂದ ತತ್ವಶಾಸ್ತ್ರಕ್ಕೆ ಇಮ್ಮಡಿ ಕೆಲಸವಿದೆ: ಅದು ಪ್ರಸಕ್ತ ವಿಜ್ಞಾನದ ಪ್ರಸಕ್ತ ಗುರಿಗಳನ್ನು ವಿಮರ್ಶಿಸಿ ಮೌಲ್ಯಗಳ ಬಗೆಗೆ ಅರಿವು ಮೂಡಿಸಬೇಕಾಗುತ್ತದೆ. ಹೊಸ ಸಂಪನ್ಮೂಲಗಳ ಒಡೆತನದಿಂದ ಯಾವ ಮೌಲ್ಯಗಳು ಹಳಸಾಗಿವೆ ಮತ್ತು ಅವುಗಳ ಈಡೇರಿಕೆಗೆ ಮಾರ್ಗಗಳಿಲ್ಲದೆ ಅವು ಕೇವಲ ಭಾವಚಾಪಲ್ಯದ( sentimental) ಗುಣ ಹೊಂದಿವೆ ಎಂಬುದನ್ನು ತತ್ವಶಾಸ್ತ್ರ ತೋರಿಸಬೇಕಾಗುತ್ತದೆ. ಅಲ್ಲದೆ, ತತ್ವಶಾಸ್ತ್ರವು ಭವಿಷ್ಯದ ಸಾಮಾಜಿಕ ಹೋರಾಟಗಳಲ್ಲಿ ವಿಶೇಷವಾದ ವಿಜ್ಞಾನದ

ಹೊಣೆಯನ್ನು ವ್ಯಾಖ್ಯಾನಿಸಬೇಕಾಗುತ್ತದೆ. ಏನನ್ನು ಮಾಡಬೇಕು ಹಾಗೂ ಮಾಡಬಾರದು ಎನ್ನುವುದರ ಶೈಕ್ಷಣಿಕ ಸಮೀಕರಣವಿಲ್ಲದೆ ತತ್ವಶಾಸ್ತ್ರವು ಈ ಕಾರ್ಯದಲ್ಲಿ ಯಶಸ್ವಿಯಾಗದು. ಅದು ಬೌದ್ಧಿಕವಾಗಿ ರಚಿಸುವ ಮೌಲ್ಯಗಳನ್ನು ತತ್ ಕ್ಷಣದ ಅಸ್ತಿತ್ವಕ್ಕೆ ತರಲು ತತ್ವಶಾಸ್ತ್ರೀಯ ಸಿದ್ಧಾಂತವು ಅಲ್ಲಾವುದ್ದೀನ್ ನ ಮಂತ್ರದ ದೀಪವನ್ನು ಹೊಂದಿಲ್ಲ. ಯಾಂತ್ರಿಕ ಕಲೆಗಳಲ್ಲಿ ವಿಜ್ಞಾನವು ವಸ್ತುಗಳ ಶಕ್ತಿಯನ್ನು ಗುರುತಿಸಿದ ಗುರಿಗಳಿಗಾಗಿ ಬಳಸಿಕೊಳ್ಳುವ ವಸ್ತು ನಿರ್ವಹಣಾ ವಿಧಾನವಾಗುತ್ತದೆ. ಶೈಕ್ಷಣಿಕ ಕಲೆಗಳಲ್ಲಿ ತತ್ವಶಾಸ್ತ್ರವು ಜೀವನದ ಗಂಭೀರ ಹಾಗೂ ವಿಚಾರಪೂರ್ಣ ಪರಿಕಲ್ಪನೆಗೆ ಅನುಗುಣವಾಗಿ ಮಾನವನ ಶಕ್ತಿಗಳನ್ನು ಬಳಸಿಕೊಳ್ಳಲು ವಿಧಾನಗಳನ್ನು ಸೃಜಿಸಬಲ್ಲದು. ತಾತ್ವಿಕ ವಿವೇಚನೆಗಳು ಪರೀಕ್ಷೆಗೊಳಪಟ್ಟು ಸದೃಢಗೊಳ್ಳುವ ಪ್ರಯೋಗಶಾಲೆಯೇ ಶಿಕ್ಷಣ.

ಯೂರೋಪಿನ ತತ್ವಶಾಸ್ತ್ರವು ಶೈಕ್ಷಣಿಕ ಪ್ರಶ್ನೆಗಳ, ವಿಚಾರಗಳ ನೇರ ಒತ್ತಡದಲ್ಲಿ ಉಗಮವಾಯಿತು ( ಇದು ಆದದ್ದು ಅಥೆನ್ಸ ನ ನಾಗರಿಕರ ಮಧ್ಯೆ.) ಎನ್ನುವುದು ಧ್ವನಿಪೂರ್ಣ. ಇದಕ್ಕೂ ಮೊದಲು ಗ್ರೀಕರು ಏಷ್ಯಾ ಮೈನರ್ ಮತ್ತು ಇಟಲಿಯಲ್ಲಿ ಬೆಳೆಸಿದ ತತ್ವಶಾಸ್ತ್ರದ ಇತಿಹಾಸವು ಇಂದು ನಾವು ಅರ್ಥ ಮಾಡಿಕೊಳ್ಳುವಂತೆ ವಿಜ್ಞಾನದ ಇತಿಹಾಸದಲ್ಲಿ ಒಂದು ಅಧ್ಯಾಯ ಮಾತ್ರ. ಅದು ಪ್ರಕೃತಿಯನ್ನು ಕುರಿತಾಗಿತ್ತು ಮತ್ತು ಅದರ ಜಿಜ್ಞಾಸೆಗಳು ವಸ್ತುಗಳು ಹೇಗೆ ಉಂಟಾಗುತ್ತವೆ ಮತ್ತು ಬದಲಾಗುತ್ತವೆ ಎಂಬುದಾಗಿತ್ತು. ಆ ನಂತರ ಸೋಫಿಸ್ಟ್ಸ ಎಂದು ಕರೆಯಲ್ಪಟ್ಟ ಸಂಚಾರಿ ಶಿಕ್ಷಕರು ಪ್ರಾಕೃತಿಕ ತತ್ವಶಾಸ್ತ್ರಜ್ಞರ ಫಲಿತಾಂಶ ಮತ್ತು ವಿಧಾನಗಳನ್ನು ಮಾನವ ವರ್ತನೆಗಳಿಗೆ ಅನ್ವಯಿಸಿದರು.

ಯೂರೋಪಿನ ಮೊದಲ ಉದ್ಯೋಗೀ( professional) ಶಿಕ್ಷಕರಾದ ಸೋಫಿಸ್ಟ್ ರು ಯುವಜನತೆಗೆ ಅನೇಕ ಸಂಗತಿಗಳ ಕುರಿತು ಬೋಧಿಸಿದರು: ಸದ್ಗುಣ, ರಾಜಕೀಯ ಕಲೆಗಳು, ನಗರ ಹಾಗೂ ಗೃಹ ನಿರ್ವಹಣೆ ಮುಂತಾಗಿ. ಹೀಗೆ ತತ್ವಶಾಸ್ತ್ರವು ವ್ಯಕ್ತಿಯು ವಿಶ್ವದೊಂದಿಗೆ, ಒಂದು ವಿಸ್ತೃತ ವರ್ಗದೊಂದಿಗೆ, ಒಂದು ಸಾಮಾಜಿಕ ಗುಂಪಿನೊಂದಿಗೆ ಹೊಂದುವ ಸಂಬಂಧದ ಕುರಿತು ವ್ಯವಹರಿಸಿತು; ಮಾನವ ಹಾಗೂ ಪ್ರಕೃತಿಯ, ಪರಂಪರೆ ಹಾಗೂ ಚಿಂತನೆ, ಜ್ಞಾನ ಹಾಗೂ ಕ್ರಿಯೆ ಈ ನಡುವಿನ ಸಂಬಂಧಗಳ ಜಿಜ್ಞಾಸೆ ಮಾಡಿತು. ಸದ್ಗುಣವನ್ನು, ಯಾವುದೇ ಮಾರ್ಗದಲ್ಲಿ ಒಪ್ಪಿತ ಶ್ರೇಷ್ಠತೆಯನ್ನು ಕಲಿಯಬಹುದೇ? ಕಲಿಕೆ ಎಂದರೆ ಏನು? ಅದು ಜ್ಞಾನದ ಕುರಿತಾದದ್ದು. ಹಾಗಿದ್ದರೆ

ಜ್ಞಾನ ಎಂದರೇನು? ಅದನ್ನು ಸಾಧಿಸುವುದು ಹೇಗೆ? ಅದು ಇಂದ್ರಿಯಗಳ ಮೂಲಕವೇ? ಏನನ್ನಾದರೂ ಮಾಡುವ ತರಬೇತಿಯ ಮೂಲಕವೇ? ಒಂದು ತಾರ್ಕಿಕ ಶಿಸ್ತಿಗೆ ಒಳಗಾಗಿರುವ ವೈಚಾರಿಕತೆಯ ಮೂಲಕವೇ? ಗ್ರೀಕರ ರೀತಿಯಲ್ಲಿ ಹೇಳುವುದಾದರೆ ಕಲಿಕೆ ಎಂದರೆ ಅರಿವಿಗೆ ಬರುವುದಾದುದರಿಂದ ಅದು ಒಂದು ಚಲನೆಯನ್ನು ಒಳಗೊಳ್ಳುತ್ತದೆ: ಅಜ್ಞಾನದಿಂದ ಜ್ಞಾನಕ್ಕೆ, ವಿವೇಕಕ್ಕೆ, ಅಪೂರ್ಣತೆಯಿಂದ ಪೂರ್ಣತೆಗೆ, ದೋಷದಿಂದ ಪರಿಪೂರ್ಣತೆಗೆ, ಇರದಿರುವಿಕೆಯಿಂದ ಇರುವಿಕೆಗೆ ( from non-being to being). ಇಂತಹ ಸ್ಥಿತ್ಯಂತರ ಹೇಗೆ ಸಾಧ್ಯ? ಪರಿವರ್ತನೆ, ಆಗುವಿಕೆ, ಬೆಳವಣಿಗೆ ನಿಜಕ್ಕೂ ಸಾಧ್ಯವೇ? ಸಾಧ್ಯವಿದ್ದರೆ ಹೇಗೆ? ಒಂದು ವೇಳೆ ಈ ಪ್ರಶ್ನೆಗಳಿಗೆ ಉತ್ತರಿಸಿದರೆ ಆಗ ಸದ್ಗುಣದೊಂದಿಗೆ ಬೋಧನೆ ಮತ್ತು ಜ್ಞಾನಗಳಿಗಿರುವ ಸಂಬಂಧವೇನು?

ಈ ಕೊನೆಯ ಪ್ರಶ್ನೆಯು ಎತ್ತುವ ಸಮಸ್ಯೆ ಎಂದರೆ ವಿಚಾರ ಮತ್ತು ಕ್ರಿಯೆ, ಸಿದ್ಧಾಂತ ಮತ್ತು ಆಚರಣೆ ಇವುಗಳಿಗೆ ಇರುವ ಸಂಬಂಧದ ಕುರಿತಾದದ್ದು, ಏಕೆಂದರೆ ಸದ್ಗುಣ ಇರುವುದು ಕ್ರಿಯೆಯಲ್ಲಿ. ವೈಚಾರಿಕತೆಯ ಕಾರ್ಯವಾದ ಅರಿವು ಮನುಷ್ಯನ ಅತ್ಯಂತ ಶ್ರೇಷ್ಠ ಗುಣವಲ್ಲವೇ? ಪರಿಣಾಮವಾಗಿ, ನಾಗರಿಕ ಬದುಕು, ಒಳ್ಳೆಯ ನೆರೆಹೊರೆಯವರು ಆಗಿರುವುದು ಇವುಗಳಿಗೆ ಹೋಲಿಸಿದರೆ ಶುದ್ಧ ಬೌದ್ಧಿಕ ಚಟುವಟಿಕೆಯೇ ಎಲ್ಲಾ ಶ್ರೇಷ್ಠತೆಗಳಿಗೆ ಹಿರಿದಲ್ಲವೇ? ಅಥವಾ, ಇನ್ನೊಂದು ರೀತಿಯಲ್ಲಿ ನೋಡಿದಾಗ, ಗುಣಕ್ಕೆ ಕಳಂಕವಾಗುವ, ಸಮುದಾಯದ ಬದುಕಿನಲ್ಲಿ ವ್ಯಕ್ತಿ- ವ್ಯಕ್ತಿಗಳನ್ನು ಬೆಸೆಯುವ ಅಗತ್ಯವಾದ ಸಾಮಾಜಿಕ ಸಂಬಂಧಗಳನ್ನು ಹಾಳು ಮಾಡುವ ಪ್ರದರ್ಶಿತ ಬೌದ್ಧಿಕ ಜ್ಞಾನವು ಹೆಚ್ಚಿನದಾದೀತೇ? ಅದು ಟೊಳ್ಳಾದ ನಿರರ್ಥಕ ತೋರಿಕೆಗಿಂತ ಮಿಗಿಲೇ? ಸರಿಯಾದ ಏಕೈಕ ಬದುಕು( ಏಕೆಂದರೆ ಅದು ಏಕೈಕ ನೈತಿಕ ಬದುಕಾದುದರಿಂದ) ಸಮುದಾಯದ ರೂಢಿಗತ ಪದ್ಧತಿಗಳಿಗೆ ವಿಧೇಯವಾಗಿ ಒಗ್ಗಿಕೊಳ್ಳುವುದರಲ್ಲಿ ಇಲ್ಲವೇ? ಹೊಸ ಶಿಕ್ಷಣವು ಸಮುದಾಯದ ಸ್ಥಾಪಿತ ಪರಂಪರೆಗಳಿಗೆ ಪ್ರತಿಯಾದ ಒಂದು ಅಳತೆಗೋಲನ್ನು ನಿರ್ಮಿಸುವುದರಿಂದ ಅದು ಒಳ್ಳೆಯ ಪೌರತ್ವಕ್ಕೆ ಶತ್ರುವಲ್ಲವೇ?

ಎರಡು ಮೂರು ಪೀಳಿಗೆಗಳ ಅವಧಿಯಲ್ಲಿ ಇಂತಹ ಪ್ರಶ್ನೆಗಳನ್ನು ಅವುಗಳಿಗೆ ಶಿಕ್ಷಣದೊಂದಿಗೆ ಇದ್ದ ಪ್ರಾಯೋಗಿಕ ಸಂಬಂಧದಿಂದ ಬೇರ್ಪಡಿಸಿ ಸ್ವತಂತ್ರವಾಗಿ ಚರ್ಚಿಸಲಾಯಿತು. ಎಂದರೆ ಅವುಗಳನ್ನು ಒಂದು ಸ್ವತಂತ್ರ ಅಧ್ಯಯನದ ಶಾಖೆಯಾಗಿ, ತತ್ವಶಾಸ್ತ್ರದ ವಿಚಾರಗಳಾಗಿ ಪರಿಗಣಿಸಲಾಯಿತು.

ಯೂರೋಪಿನ ತತ್ವಶಾಸ್ತ್ರೀಯ ಚಿಂತನೆಯು ಶಿಕ್ಷಣದ ವಿಧಾನದ ಸಿದ್ಧಾಂತವಾಗಿ ಉಗಮವಾಯಿತು ಎನ್ನುವ ವಸ್ತುಸ್ಥಿತಿಯೇ ತತ್ವಶಾಸ್ತ್ರ ಮತ್ತು ಶಿಕ್ಷಣಕ್ಕಿರುವ ನಿಕಟ ಸಂಬಂಧದ ಸುವ್ಯಕ್ತ ಸಾಕ್ಷಿಯಾಗುತ್ತದೆ. "ಶಿಕ್ಷಣದ ತತ್ವಶಾಸ್ತ್ರ" ಎನ್ನುವುದು ಒಂದು ಅಮೂಲಾಗ್ರವಾಗಿ ಭಿನ್ನವಾದ ಹುಟ್ಟು ಹಾಗೂ ಗುರಿಯನ್ನು ಹೊಂದಿದ ಆಚರಣೆಯ ಪದ್ದತಿಗೆ, ಕಾರ್ಯಕ್ಷೇತ್ರಕ್ಕೆ, ಸಿದ್ದ ವಿಚಾರಗಳ ಬಾಹ್ಯ ಹೇರಿಕೆಯಲ್ಲ. ಸಮಕಾಲೀನ ಸಾಮಾಜಿಕ ಬದುಕಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ಮಾನಸಿಕ ಹಾಗೂ ನೈತಿಕ ಅಭ್ಯಾಸ ಮತ್ತು ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳುವ ವಿಚಾರದಲ್ಲಿ ಮಾಡುವ ಸ್ಪಷ್ಟ ಸೂತ್ರಗಳು. ತತ್ವಶಾಸ್ತ್ರಕ್ಕೆ ನೀಡಬಹುದಾದ ಅತ್ಯಂತ ತೀಕ್ಷ್ಣವಾದ ವ್ಯಾಖ್ಯೆ ಎಂದರೆ ತತ್ವಶಾಸ್ತ್ರವು ಶಿಕ್ಷಣದ ಅತ್ಯಂತ ಸಾಮಾನ್ಯ ಹಂತಗಳಲ್ಲಿನ ಶಿಕ್ಷಣ ಸಿದ್ಧಾಂತ ಎನ್ನುವುದು.

ಹೀಗೆ ತತ್ವಶಾಸ್ತ್ರ, ಶಿಕ್ಷಣ,ಮತ್ತು ಸಾಮಾಜಿಕ ಆದರ್ಶಗಳ ಪುನರ್ ರಚನೆ ಮತ್ತು ವಿಧಾನವು ಜೊತೆಜೊತೆಯಾಗಿ ಸಾಗುತ್ತದೆ. ಇಂದಿನ ಕಾಲದಲ್ಲಿ ಶೈಕ್ಷಣಿಕ ಪುನರ್ ರಚನೆಯ ವಿಶೇಷ ಅಗತ್ಯವಿದ್ದರೆ, ಈ ಅಗತ್ಯವು ಸಾಂಪ್ರದಾಯಿಕ ತತ್ವಶಾಸ್ತ್ರದ ಪದ್ಧತಿಗಳಲ್ಲಿ ಪುನರ್ ರಚನೆ ಯನ್ನು ತುರ್ತಿನದಾಗಿಸಿದ್ದರೆ, ಅದಕ್ಕೆ ಕಾರಣಗಳು ವಿಜ್ಞಾನದ ಮುನ್ನಡೆ, ಔದ್ಯೋಗಿಕ ಕ್ರಾಂತಿ ಮತ್ತು ಪ್ರಜಾಪ್ರಭುತ್ವದ ಬೆಳವಣಿಗೆಯೊಂದಿಗೆ ಆಗುತ್ತಿರುವ ಸಾಮಾಜಿಕ ಜೀವನದ ತೀವ್ರ ಸ್ಥಿತ್ಯಂತರಗಳು. ಅಂತಹ ಪ್ರಾಯೋಗಿಕ ಬದಲಾವಣೆಗಳನ್ನು ಎದುರಿಸಲು ಅಗತ್ಯವಾದ ಶೈಕ್ಷಣಿಕ ಸುಧಾರಣೆಗಳ ಬೇಡಿಕೆ ಅನಿವಾರ್ಯ. ಹಾಗೆಯೇ ಈ ಸಾಮಾಜಿಕ ಬದಲಾವಣೆಗಳಲ್ಲಿ ಯಾವ ವಿಚಾರಗಳು ಮತ್ತು ಆದರ್ಶಗಳು ಸೂಚಿತವಾಗಿವೆ ಎಂದು ಜನರನ್ನು ಕೇಳುವುದು ಮತ್ತು ಅವರು ಹಿಂದಿನ ಮತ್ತು ಭಿನ್ನವಾದ ಸಂಸ್ಕೃತಿಗಳಿಂದ ಪಡೆದ ವಿಚಾರಗಳು ಮತ್ತು ಆದರ್ಶಗಳಲ್ಲಿ ಅವರಿಗೆ ಯಾವ ರೀತಿಯ ಪರಿಷ್ಕರಣೆ ಅಗತ್ಯ ಎಂದು ಅರಿಯುವುದು ಅಗತ್ಯ. ಆನುಷಂಗಿಕವಾಗಿ ಈ ಪುಸ್ತಕದುದ್ದಕ್ಕೆ ಮತ್ತು ಸ್ಪಷ್ಟವಾಗಿಯೇ ಈ ಕಡೆಯ ಕೆಲವು ಅಧ್ಯಾಯಗಳಲ್ಲಿ ನಾವು ಮನಸ್ಸು ಮತ್ತು ಶರೀರ, ಸಿಧ್ಧಾಂತ ಮತ್ತು ಕ್ರಿಯೆ/ ಆಚರಣೆ, ಮಾನವ ಮತ್ತು ಪ್ರಕೃತಿ, ವ್ಯಕ್ತಿ ಮತ್ತು ಸಮಾಜ ಈ ಪ್ರಶ್ನೆಗಳಲ್ಲಿಯೇ ತೊಡಗಿಕೊಂಡಿದ್ದೇವೆ. . ಮುಕ್ತಾಯದ ಅಧ್ಯಾಯಗಳಲ್ಲಿ ನಾವು ಜ್ಞಾನದ ತತ್ವಶಾಸ್ತ್ರ ಹಾಗೂ ನೈತಿಕತೆಯ ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಹಿಂದಿನ ಚರ್ಚೆಗಳನ್ನು ಸಾರಾಂಶೀಕರಿಸಲಿದ್ದೇವೆ.

**ಸಾರಾಂಶ**

ಹಿಂದಿನ ಚರ್ಚೆಗಳಲ್ಲಿ ಸೂಚಿತವಾದ ತತ್ವಶಾಸ್ತ್ರೀಯ ಸಮಸ್ಯೆಗಳನ್ನು ಪರಿಶೀಲಿಸಿದ ನಂತರ ತತ್ವಶಾಸ್ತ್ರ ಎಂದರೆ ಸಾಧಾರಣೀಕೃತ ಶಿಕ್ಷಣದ ಸಿದ್ಧಾಂತ ಎಂದು ವ್ಯಾಖ್ಯೆಯನ್ನು ನೀಡಲಾಯಿತು. ತತ್ವಶಾಸ್ತ್ರವು ಒಂದು ರೀತಿಯ ಚಿಂತನಾಕ್ರಮ; ಅದರ ಉಗಮವಿರುವುದು ಅನುಭವದ ವಸ್ತುವಿಷಯದಲ್ಲಿರುವ ಅನಿಶ್ಚಿತ(uncertain)ತೆಯಲ್ಲಿ. ಅದರ ಗುರಿ ಆ ಅನಿಶ್ಚಿತದ, ಗೊಂದಲದ, ಸ್ವರೂಪವನ್ನು ಗುರುತಿಸುವುದು ಹಾಗೂ ಆ ಗೊಂದಲವನ್ನು ಪರಿಹರಿಸುವುದಕ್ಕಾಗಿ ಕ್ರಿಯೆಯಲ್ಲಿ ಪರೀಕ್ಷೆಗೊಳಪಡುವ ಒಂದು ಪೂರ್ವಸಿದ್ಧಾಂತವನ್ನು ರಚಿಸುವುದರಲ್ಲಿ. ತತ್ವಶಾಸ್ತ್ರೀಯ ಚಿಂತನೆಯ ವೈಶಿಷ್ಟ್ಯ ಎಂದರೆ ಅದು ಚರ್ಚಿಸುವ ಅನಿಶ್ಚಿತತೆಗಳು ವಿಶಾಲ ಸಾಮಾಜಿಕ ಪರಿಸ್ಥಿತಿಗಳಲ್ಲಿ ಮತ್ತು ಗುರಿಗಳಲ್ಲಿರುತ್ತವೆ; ಆ ಪರಿಸ್ಥಿತಿಗಳು ಮತ್ತು ಗುರಿಗಳು ವ್ಯವಸ್ಥಿತ ಹಿತಾಸಕ್ತಿಗಳು ಮತ್ತು ಸಾಂಸ್ಥಿಕ ಸಮರ್ಥನೆಗಳ ನಡುವಿನ ಘರ್ಷಣೆಗಳಲ್ಲಿರುತ್ತವೆ. ಅಂತಹ ವಿರುದ್ಧ ಪ್ರವೃತ್ತಿಗಳ ನಡುವೆ ಒಂದು ಸಾಮರಸ್ಯವನ್ನು ಮೂಡಿಸಲು ಇರುವ ಒಂದೇ ಮಾರ್ಗ ಎಂದರೆ ಭಾವನಾತ್ಮಕ ಹಾಗೂ ಬೌದ್ಧಿಕ ಮನೋವೃತ್ತಿಗಳಲ್ಲಿ ಮಾರ್ಪಾಟು, ತತ್ವಶಾಸ್ತ್ರವು ಏಕಕಾಲಕ್ಕೆ ಬದುಕಿನ ವಿವಿಧ ಆಸಕ್ತಿಗಳನ್ನು, ಹಿತಾಸಕ್ತಿಗಳನ್ನು ಒಳಗೊಳ್ಳುವ ಒಂದು ಸ್ಪಷ್ಟವಾದ ಸೂತ್ರ; ಹಾಗೂ ಅದು ಹಿತಾಸಕ್ತಿಗಳ ಸಮತೋಲನವನ್ನು ಸಾಧ್ಯವಾಗಿಸುವ ದೃಷ್ಟಿಕೋನಗಳು ಮತ್ತು ವಿಧಾನಗಳನ್ನು ಮುಂದಿಡುವ ಮಾರ್ಗ. ಶಿಕ್ಷಣವು ಯಾವುದು ಅಪೇಕ್ಷಣೀಯ ಎಂಬುದರ ಬಗೆಗೆ ಕೇವಲ ಊಹನ( hypothesis) ಆಗದೆ ಅಗತ್ಯ ಮಾರ್ಪಾಟುಗಳನ್ನು ಸಾಧಿಸಬಹುದಾದ ಪ್ರಕ್ರಿಯೆ ಆದುದರಿಂದ ನಾವು ಮುಂದಿನ ಹೇಳಿಕೆಯ ಸಮರ್ಥನೆಗೆ ತಲುಪಬಹುದು: ತತ್ವಶಾಸ್ತ್ರವು ಒಂದು ಶಿಕ್ಷಣಸಿದ್ಧಾಂತ. ಅದು ಉದ್ದೇಶಪೂರ್ವಕವಾಗಿ ನಡೆಸುವ ಪ್ರಾಯೋಗಿಕ ಆಚರಣೆಯಾಗಿದೆ.